ಅಪರಂಜಿ

ಜೂನ್ 99

ತಿಳಿನಗೆಯ ಕಾರಂಜಿ



ಪ್ರಕಾಶ್

ನಾಡಾಡಿ

ಶೀನೂ

ನಾ. ಕಸ್ತೂರಿ

ಶಿವು

ಬೇಲೂರು ರಾಮಮೂರ್ತಿ

ಇಸ್ಮೇಯಿಲ್

ವೈ. ವಿ. ಗುಂಡೂರಾವ್

ಟಿ. ಆರ್. ರಾಧಾಕೃಷ್ಣ

ಎಂ. ಎನ್. ಕೆ.

ಗುಂಡೂ ರಾ. ನಾ.

ಹೆಚ್. ಗೋಪಾಲಕೃಷ್ಣ

ಬಿಡಿ ಪ್ರತಿ: ರೂ. 5.00




ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಋಣಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಕೊರವಂಜಿಗೆ ಲಕ್ಷಣ್ ಬರೆದ ವ್ಯಂಗ ಚಿತ್ರ

ಶುಭಾಶಯಗಳೊಂದಿಗೆ

ವಿಜಯಾ ಮತ್ತು ಆನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500

ವಿಳಾಸ : ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು- 560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16 ಜೂನ್ 99 ಸಂಚಿಕೆ-9

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



○ ಪ್ರಕಾಶ್

ನಗರ ವಿ.ವಿ. ಬಿ.ಬಿ.ಎಂ. ಪರೀಕ್ಷೆ ಪ್ರಶ್ನೆ ಪತ್ರಿಕೆ ಬಯಲು

- ಪತ್ರಿಕೆ

ಇದೂ ಒಂದು ತರಹ ಮ್ಯಾನೇಜ್‌ಮೆಂಟ್ !!!

★★★

ನನಗೆ ಯಾರಾದರೂ ಒಂದು ಏಟು ಕೊಟ್ಟರೆ, ನಾನು ಹತ್ತು ಕೊಡುತ್ತೇನೆ!

- ಜಯಲಲಿತ

ಯೇಸು ಬೆರಗಾದನಂತೆ!!

★★★

''ಕಾಂಗ್ರೆಸ್ ಮೇಲೆ ಗೂಬೆ ಕೂರಿಸುವ ಕೆಲಸ ಬೇಡ''

-ಪತ್ರಿಕೆಯಲ್ಲಿ ಹೇಳಿಕೆ

ಹೌದು, ಕೂರಿಸಲು ಜಾಗವೇ ಇಲ್ಲ !!

★★★

ಕಾಲೇಜ್ ಹತ್ತಿರದ ಲಾಡ್ಜ್‌ನಲ್ಲಿ ಉತ್ತರ ಬರೆಯುತ್ತಿದ್ದ ಲಾ ಕಾಲೇಜ್ ವಿದ್ಯಾರ್ಥಿನಿ ಬಂಧನ

- ಸುದ್ದಿ

ಆಕೆ ಕಾನೂನನ್ನೇ ಕೈಗೆ ತೆಗೆದುಕೊಂಡಳು!!

★★★

ಹೆಚ್ಚುವರಿ ಬಸ್‌ಗಾಗಿ ಗಲಭೆ; 43 ಬಸ್‌ಗಳಿಗೆ ಕಲ್ಲು ತೂರಿ ಹಾನಿ

- ಬೆಂಗಳೂರು ಸುದ್ದಿ

ಈಗ ಹೆಚ್ಚು - ವರಿ!!

★★★

ಸಮಾನ ಮನಸ್ಕ ಸಚಿವರ ಸಭೆ ಇಂದು

- ಸುದ್ದಿ

ಮನಶ್ಶಾಸ್ತ್ರಜ್ಞರೆಲ್ಲ ಚಕಿತರಾದರಂತೆ!!

★★★

ಸೋನಿಯಾ ದೇಶಭಕ್ತಿ ಪ್ರಶ್ನಾತೀತ


- ಹೇಳಿಕೆ

ಯಾವ ದೇಶ??

★★★

ಮಳೆ - ಚಳಿಯಲ್ಲಿ ಭಾರತ ಸಮಶೀತೋಷ್ಣವಾಗಿ ಆಡಲಿ ಎಂದು ಅಪರಂಜಿ ಹಾರೈಸುತ್ತಾಳೆ.

★★★



ಚೋಜಿಗ

- ನಾಡಾಡಿ

ಇಸ್ಪೇಸ್ರ್ಯನ ಫೋಟೋ ಮಡಕ್ಕೊಂಡು
ತೆಂಗಿನ ಕಾಯ್ನಾ ಒಡ್ದು:
ಕಟ್ಟಿದ್ರ್ಯ ನಮ್ಮೂರಾಗೆ
ನೀರಿನ ಚಾನೆಲ ದೊಡ್ದು.

ಡೇಮಿನ ಬಾಗ್ಲ ಎತ್ತಿ ನೀರನ ಬುಟ್ರು
ಕರೆಂಟ ತೆಗಯಾಕಂತ
ಮೂರು ಮೈಲಿ ಆಚೆ ಮಿಸನ್ ಇಟ್ಟಿದ್ರು
ನೀರಿಗ ತಿರುಗೋ ಯಂತ್ರ

ಚಾನೆಲ್‌ನಾಗೆ ನೀರ್ ಬುಟ್ರೂನು
ಗುರಿ ತಲುಪ್ಲೇ ಇಲ್ಲ.
ಇಂಜಿನೋರ್‌ಗಳೆಲ್ಲ ತಲೆ ಕೆರಕೊಂಡ್ರು
ನೀರು ಎಲ್ಲಿ ಅಂತ.

ಚಾನೆಲ್ ಬದೀಲಿ ರೈತರ ಗದ್ದೆ
ನೀರಿಲ್ದೆ ಒಣಗಿ ನಿಂತಿದ್ವು.
ಒಂದೇ ದಿನಕ್ಕೆ ಗದ್ದೆ ತುಂಬೆಲ್ಲ
ಹಸಿರೇ ಹಸಿರು ಎಲ್ಲೆಲ್ಲು.

ಸಿಮೆಂಟು ಕಬ್ಣ ಎಲ್ಲ ಆಕಿ
ಚಾನಲ್ ಕಟ್ಟಿದ್ರೂನು
ಇಲ್ಲಿ ನೀರು ಅಲ್ಲಿ ಹ್ಯಾಗ್ ಹೋತು
ಯೋಳನೇಕ ಇಂಜಿನೀರು?

ಅನುಸರಿಸಿಕೊಂಡು ಹೋಗಿ

ಶ್ರೀನಿವಾಸ ವೈದ್ಯ (ಶೀನೂ)

ಈಗ ವಿದ್ಯುತ್ ತೊಂದರೆಗಳಿಗೆ ದೂರು ಕೊಡುವದನ್ನು ಕೇಂದ್ರೀಕೃತಗೊಳಿಸಿ ಅತ್ಯಂತ ಸುಲಭಗೊಳಿಸಿದ್ದಾರೆ. ನೀವು ದೂರವಾಣಿ ಸಂಖ್ಯೆ 1917ಕ್ಕೆ ಡಯಲಿದರೆ ಸಾಕು. ಉಳಿದದ್ದನ್ನೆಲ್ಲ ಅವರೇ ಮಾಡುತ್ತಾರೆ.

ಮೊನ್ನೆರಾತ್ರಿ ಮಳೆಯಿಂದಾಗಿ ಇದ್ದಕ್ಕಿದ್ದಂತೆ, ವಿದ್ಯುತ್ ಸರಬರಾಜು ನಿಂತು ಹೋದಾಗ ಗ್ರಾಹಕರೊಬ್ಬರ ಅನುಭವ ಕೇಳಿ

★★★

ಗ್ರಾ : 1917

ಕ.ವಿ.ಮಂ.: ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ದೂರು ಕೇಂದ್ರದ ಸಹಾಯ ಕೇಳಿದ್ದಕ್ಕಾಗಿ ಧನ್ಯವಾದಗಳು. 'ಬೀಪ್'ನ ನಂತರ ಸೊನ್ನೆಯನ್ನು ಒತ್ತಿ... (ಬೀಪ್)

ಗ್ರಾ : ಒತ್ತಿದೆ

... : ಈ ಸೌಲಭ್ಯವನ್ನು ನಿಮ್ಮ ದೂರವಾಣಿಗೆ ಬದಲಿಸಿಲ್ಲ.

ಗ್ರಾ : (ಛೆ ಎಂದು ಲೊಚಗುಟ್ಟಿ ಮತ್ತೆ) 1917

ಕ.ವಿ.ಮಂ. : ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ದೂರು ಕೇಂದ್ರದ ಸಹಾಯ' ಕೇಳಿದ್ದಕ್ಕಾಗಿ ಧನ್ಯವಾದಗಳು. 'ಬೀಪ್'ನ ನಂತರ ಸೊನ್ನೆಯನ್ನು ಒತ್ತಿ... (ಬೀಪ್)

ಗ್ರಾ : ಒತ್ತಿದೆ.

ಕ.ವಿ.ಮಂ. : ಸೊನ್ನೆಯನ್ನು ಒತ್ತಿ ಶೂನ್ಯ ಸಂಪಾದನೆ ಮಾಡಿದ್ದಕ್ಕಾಗಿ ಅಭಿನಂದನೆಗಳು. ಇಂತಹ ಮಹತ್ಸಾಧನೆಯನ್ನು ಮಾಡಿ, ವಿದ್ಯುತ್ ತೊಂದರೆಯಂತಹ ಕ್ಷುಲ್ಲಕ ಪ್ರಾಪಂಚಿಕ ವಿಷಯಕ್ಕೆ ತಲೆ ಕೆಡಿಸಿಕೊಳ್ಳುವರೇ...? ಹರಹರಾ ಶ್ರೀ ಚನ್ನಸೋಮೇಶ್ವರ. ಧನ್ಯವಾದಗಳು. ನಿಮ್ಮ ಸೇವೆಯೇ ನಮಗೆ ಸಂತೋಷ.

ಗ್ರಾ : (ಮತ್ತೆ) 1917.

ಕ.ವಿ.ಮಂ. : ಕ.ವಿ.ಮಂ. ದೂ.ಸ. ಕೇಂದ್ರದಿಂದ ಮತ್ತೆ ಮತ್ತೆ ಸಹಾಯ ಕೇಳುತ್ತಿರುವ ನಿಮ್ಮ ಧಾರ್ಷ್ಟ್ಯವನ್ನು ಮೆಚ್ಚಬೇಕೋ, ಮೌಢ್ಯಕ್ಕೆ ಕನಿಕರಿಸಬೇಕೋ ತಿಳಿಯದು. ಈಗ 'ಬೀಪ್'ನ ನಂತರ ಸಂಖ್ಯೆ ಒಂದನ್ನು ಒತ್ತಿ. ಧನ್ಯವಾದಗಳು... (ಬೀಪ್)

ಗ್ರಾ : ಒತ್ತಿದೆ.

ಕ.ವಿ.ಮಂ. : ಈಗ 'ಬೀಪ್'ನ ನಂತರ, ನೀವು ಕನ್ನಡದಲ್ಲಿ ದೂರು ಸಲ್ಲಿಸುತ್ತಿದ್ದರೆ ಸಂಖ್ಯೆ ಒಂದನ್ನು ಒತ್ತಿ, ಇಂಗ್ಲೀಷಿನಲ್ಲಿ ದೂರು ಸಲ್ಲಿಸುತ್ತಿದ್ದರೆ ಸಂಖ್ಯೆ ಎರಡನ್ನು ಒತ್ತಿ. ಧನ್ಯವಾದಗಳು... (ಬೀಪ್)

ಗ್ರಾ : ಒತ್ತಿದೆ

ಕ.ವಿ.ಮಂ. : ಈಗ ನೀವು ಮಾಡಬೇಕಾದದ್ದು ಇಷ್ಟೆ. ಬೀಪ್‌ನ ನಂತರ. ನೀವು ಸಂಖ್ಯೆ ಒಂದನ್ನು ಒತ್ತಿದ್ದರೆ ಒಂದೇ ಕೈಯಿಂದ ಶಂಖಾ ಹೊಡೆಯಿರಿ. ಎರಡನ್ನು ಒತ್ತಿದ್ದರೆ ಎರಡೂ ಕೈಯಿಂದ ಶಂಖಾ ಹೊಡೆಯಿರಿ... (ಬೀಪ್)

ಗ್ರಾ : ಹೊಡೆದೆ

ಕ.ವಿ.ಮಂ. : ಈಗ 'ಬೀಪ್'ನ ನಂತರ ನಿಮ್ಮ ಆರ್.ಆರ್. ನಂಬರನ್ನು ತಿಳಿಸಿ, ಹಾಗೆಯೇ ನಿಮ್ಮ ಅಕ್ಕಪಕ್ಕದಲ್ಲಿ ಪ್ರಮುಖ ಕಟ್ಟಡವಾಗಲೀ, ಪ್ರಮುಖ ಗುರುತಾಗಲೀ ಏನಾದರೂ ಇದ್ದರೆ ತಿಳಿಸಿ. ಧನ್ಯವಾದಗಳು... (ಬೀಪ್)

ಗ್ರಾ : ಶ್ರೀ ಲಕ್ಷ್ಮೀವೆಂಕಟೇಶ್ವರ ಕಲ್ಯಾಣ ಮಂಟಪದ ಪಕ್ಕ...

ಕ.ವಿ.ಮಂ. : ನೀವು ಪುಣ್ಯ ಜೀವಿಗಳು ಅಂತಹ ಪ್ರಸಿದ್ಧ ಕಲ್ಯಾಣ ಮಂಟಪದ ಪಕ್ಕದಲ್ಲಿ ವಾಸಿಸುತ್ತಿದ್ದೀರಿ. ಈಗ ಅಲ್ಲಿ ವಿವಾಹ ಮಹೋತ್ಸವದ ಭೋಜನ ಸಮಾರಂಭ ನಡೆದಿರಬಹುದು. 'ಬೀಪ್'ನ ನಂತರ ಅಲ್ಲಿ ಏನೇನು ಪಕ್ವಾನ್ನಗಳನ್ನು ಮಾಡಿದ್ದಾರೆಂದು ತಿಳಿಸಿ. ಧನ್ಯವಾದಗಳು... (ಬೀಪ್)

ಗ್ರಾ : ಹಾಲು ಚಿರೋಟಿ... ಬಾದಾಮ್ ಹಲ್ವ... ಚಂದ್ರಹಾರ... ಇತ್ಯಾದಿ.

ಕ.ವಿ.ಮಂ. : ಕ್ಷಮಿಸಿರಿ, ವಿದ್ಯುತ್ ಮಂಡಳಿಯವರಾದ ನಮಗೆ ತಿಂದೂ ತಿಂದೂ ಅಭ್ಯಾಸವಾಗಿದೆ. ಹಾಗಾಗಿ ತಿಂಡಿಯ ಬಗ್ಗೆ ಮಾತನಾಡದಿದ್ದರೆ ನಮ್ಮ ಆಲೋಚನೆಗೆ ಚಾಲನಾ ಕ್ರಿಯೆಯೇ ಸಿಕ್ಕುವದಿಲ್ಲ. ಕಲ್ಯಾಣ ಮಂಟಪದ ತಿಂಡಿಗಳ ಬಗ್ಗೆ ಕೇಳಿ ಸಂತೋಷವಾಯಿತು. ಈಗ 'ಬೀಪ್'ನ ನಂತರ ಎರಡರಿಂದ ಎಂಟರವರೆಗೆ ಯಾವದಾದರೊಂದು ಸಂಖ್ಯೆಯನ್ನು ಒತ್ತಿ. ಧನ್ಯವಾದಗಳು... (ಬೀಪ್)

ಗ್ರಾ : ಒತ್ತಿದೆ

ಕ.ವಿ.ಮಂ. : ಈಗ ನೀವು ಮಾಡಬೇಕಾದದ್ದು ಇಷ್ಟೇ. ಬೀಪ್ ನಂತರ ಮೊದಲು ಯಾವ ಸಂಖ್ಯೆಯನ್ನು ಒತ್ತಿದ್ದೀರೋ ಅಷ್ಟುಸಲ ಮುಂಡಾ ಮೋಚಿಕೊಂಡು ಸುಖವಾಗಿರಿ. ಧನ್ಯವಾದಗಳು... (ಬೀಪ್)

ಗ್ರಾ : ಮೋಚಿಕೊಂಡೆ

ಕ.ವಿ.ಮಂ. : ಏನ್ರೀ ಇದು ನಿಮ್ಮ ಹುಚ್ಚು. ಛಲ ಬಿಡದ ತ್ರಿವಿಕ್ರಮನಂತೆ ದೂರು ಕೊಟ್ಟೇ ತೀರುವೆನೆಂಬ ಈ ಹಟ ಯಾಕೆ? ಸರಿ 'ಬೀಪ್'ನ ನಂತರ ನಿಮ್ಮ ದೂರು ಏನೆಂದು ಬೊಗಳಿ ಹಾಳಾಗಿ ಹೋಗಿ. ಧನ್ಯವಾದಗಳು.... (ಬೀಪ್)

ಗ್ರಾ : ಸ್ವಾಮಿ ಈ ನಮ್ಮ ಬೀದಿಯಲ್ಲಿ ಎಲ್ಲರ ಮನೆಗೂ ದೀಪಗಳಿವೆ. ನಮ್ಮ ಮನೆಗೆ ಮಾತ್ರ ಎರಡು ಗಂಟೆಗಳಿಂದ ದೀಪವಿಲ್ಲ....

ಕ.ವಿ.ಮಂ. : ಅಷ್ಟೇ ತಾನೆ? ಈಗ ನೋಡಿ ಮೇಯಿನ್‌ದಿಂದ ನಿಮ್ಮ ಇಡೀ ಬೀದಿಯ ಎಲ್ಲರ ಮನೆಗಳಿಂದಲೂ ದೀಪ ತೆಗೆದು ಹಾಕಿಬಿಟ್ಟಿದ್ದೇವೆ. ನೀವು ನಿಜವಾದ ಕನ್ನಡಿಗರಾಗಿದ್ದರೆ ನಿಮಗಿಲ್ಲದ್ದು ಇನ್ನಾರಿಗೂ ಇಲ್ಲವೆಂದು ಸಂತೋಷಪಡಬೇಕಲ್ಲವೇ? ಇನ್ನು ನಾವು ಬೀಪೊಲ್ಲ. ಧನ್ಯವಾದಗಳು. ನಿಮ್ಮ ಸೇವೆಯೇ ನಮ್ಮ ಸಂತೋಷ.

ಗ್ರಾ : (ಥತ್ ಎಂದು ಮತ್ತೆ) 1917

ಕ.ವಿ.ಮಂ. : ಓ! ನೀವೇನೋ ಕಠಿಣ ಗ್ರಾಹಕ (Difficult customer) ರಾಗಿ ಕಾಣುತ್ತೀರಿ. ಯಾರ್‍ರೀ ನೀವು? ವಿದ್ಯುತ್ ಸರಬರಾಜು ಬೇಕೇ ಬೇಕೆಂಬ ಈ ಹಟ ಯಾಕ್ರೀ? ನೀವು ಈ ನಾಡಿನ ಸುಸಂಸ್ಕೃತ ಸಜ್ಜನ ಕನ್ನಡಿಗರಾಗಿದ್ದರೆ, ಹೇಗಾದರೂ ಮಾಡಿ ಅಡ್ಜಸ್ಟ್ ಮಾಡಿಕೊಂಡೋ, ಅನುಸರಿಸಿಕೊಂಡೋ ಹೋಗುತ್ತಿದ್ದಿರಿ. ನೀವು ಕನ್ನಡಿಗರಂತೆ ತೋರುದಿಲ್ಲ. ಯಾರ್‍ರೀ ನೀವು 'ಬೀಪ್'ನ ನಂತರ ಬೊಗಳ್ರೀ, ಧನ್ಯವಾದಗಳು.... (ಬೀಪ್)

ಗ್ರಾ : ನಾವು ಹುಬ್ಬಳ್ಳಿಯವರ್‍ರೀ.... ಉತ್ತರ ಕರ್ನಾಟಕದವರು, ಬೆಂಗಳೂರಾಗ ಇರಾಕ ಹತ್ತಿ ಹತ್ತ ವರಸಾತರಿ...

ಕ.ವಿ.ಮಂ. : ಮುರುಘಾ!! ಉತ್ತರ ಕರ್ನಾಟಕದವರಿಗೆ ಕನ್ನಡಿಗರು ಅಂತ ಯಾರ್‍ರೀ ಹೇಳ್ತಾರೆ? ನೀವೆಲ್ಲ ಇಲ್ಲಿ ಬಂದೇ ಬೆಂಗಳೂರು ಇಷ್ಟೊಂದು ಹದಗೆಟ್ಟು ಹೋಗಿದೆ. ಮೊದಲೆಲ್ಲ ನಾವು ತಮಿಳರೂ, ಮಾರವಾಡಿಗಳು, ಮಲೆಯಾಳಿಗಳು, ನಾವು ನಾವೇ ಎಷ್ಟೊಂದು ಸುಖವಾಗಿದ್ದೆವು ಗೊತ್ತೇನ್ರೀ? ಬಂದ್ಬಿಟ್ಟ... ಹುಬ್ಬಳ್ಳಿಯಂತೆ ಹುಬ್ಬಳ್ಳಿ... ನಿಮಗೆ ಧನ್ ಧನ್ ಒದೆತಗಳು. 'ಬೀಪ್'ನ ನಂತರ ಹಾಳಾಗಿ ಹೋಗ್ರೀ... (ಬೀಪ್)

ಗ್ರಾ : (ನೋಡೇ ಬಿಡೋಣ, ಇವನಾ..ನ ಮತ್ತೆ) 1917

ಕ.ವಿ.ಮಂ. : ಏನ್ರೀ ನಿಮ್ಮ ಗೋಳು? ಯಾಕೆ ಹೀಗೆ ಹುಶೇನು ಮಾಧುರಿಯ

ಬೆಂಬತ್ತಿದಂತೆ ನಮ್ಮ ಜೀವ ತಿಂತಾ ಇದ್ದೀರಿ? ನಿಮ್ಮ ವಿದ್ಯುತ್ತಿನ ಹುಚ್ಚು ಇನ್ನೂ ಹೋಗಿಲ್ಲವೇ? ಹಾಗಾದರೆ 'ಬೀಪ'ನ ನಂತರ ದೂರವಾಣಿ ಸಂಖ್ಯೆ 600013 ಕ್ಕೆ ಡಾಯಲ್ ಮಾಡಿ, ಧನ್ಯವಾದಗಳು... (ಬೀಪ್)

ಗ್ರಾ : ಸರಿ ಆದರೆ 600013ಕ್ಕೆ ಡಾಯಲ್ ಮಾಡಿ ಯಾರನ್ನ ಕೇಳಬೇಕು?

ಕ.ವಿ.ಮಂ. : ಯಾರನ್ನೂ ಕೇಳಬೇಡಿ. ಅದು ದೇವೇಗೌಡರ ನಂಬರು. ನೀವು ಉತ್ತರ ಕರ್ನಾಟಕದವರೆಂದು ತಿಳಿದೊಡನೇ ಅವರು ಸ್ವತಃ ತಾವೇ ಅಕ್ಕರೆಯಿಂದ ಬಂದು, ನಿಮ್ಮ ಅಹವಾಲನ್ನು ಕೇಳಿಕೊಂಡು ನಿಮ್ಮ ನೈರುತ್ಯ ವಲಯಕ್ಕೆ ವಿದ್ಯುತ್ ಶಾಕ್ ಕೊಟ್ಟು ರಕ್ತಪಾತ ಮಾಡಿಸುತ್ತಾರೆ. ಆಗಲೂ ನೀವು ಬದುಕಿದ್ದರೆ ನೋಡುವಾ. ನಿಮ್ಮ ಕುಟುಂಬದವರಿಗೆ ನಮ್ಮ ಸಂತಾಪಗಳನ್ನು ತಿಳಿಸಿ... (ಬೀಪ್)

ಗ್ರಾ : ಮತ್ತೆ 1917

ಕ.ವಿ.ಮಂ. : ರಾಮರಾಮಾ... ದೇವೇಗೌಡರ ಕೈಯಿಂದಲೂ ಪಾರಾಗಿ ಬಂದಿರೇನ್ರಿ? ಹಂಗಾರ ನೀವು ಬರೋಬರ ಹುಬ್ಬಳ್ಳಿಯವರ್ರೆಪಾ! ಏನ್ರೀ ಇದು ನಿಮ್ಮ ಹುಚ್ಚು. ವಿದ್ಯುಚ್ಛಕ್ತಿ ಮಂಡಳಿಯವರು, ವಿದ್ಯುತ್ ಸರಬರಾಜು ಮಾಡುತ್ತಾರೆಂದು ನಿಮಗೆ ಯಾರ್ರೀ ಹೇಳಿದ್ದು? ಅಪ್ಪಿ ತಪ್ಪಿ ಎಲ್ಲಾದರೂ ವಿದ್ಯುತ್ತಿನ ಪೂರೈಕೆಯಾಗುತ್ತಿದ್ದರೆ ಅದಕ್ಕೆ ವ್ಯತ್ಯಯ ಉಂಟುಮಾಡುವದೇ ಮಂಡಳಿಯ ಕೆಲಸವೆಂದು ತಿಳಿಯದೇನ್ರೀ ನಿಮಗೆ?

ಹಾಂ! ಏನಿಲ್ಲೆಂದರೂ ಆಪತ್ಕಾಲದಲ್ಲಿ ಜನರಿಗೆ ಅನುಕೂಲವಾಗಲೆಂದು, ಹರಿಶ್ಚಂದ್ರ ಘಾಟ, ಹೊಂಬೇಗೌಡ ಘಾಟಗಳಂತಹ ವಿದ್ಯುತ್ ಚಿತಾಗಾರಗಳಿಗೆ ಮಾತ್ರ ವಿದ್ಯುತ್ತನ್ನು ಪೂರೈಸಲಾಗುತ್ತಿದೆರೀ. ನಿಮಗೆ ವಿದ್ಯುತ್ತಿನದು ಅಷ್ಟು ಹುಚ್ಚೇ ಇದ್ದರೆ, ಈ ಚಿತಾಗಾರಗಳಿಗೆ ಹೋಗಿ ಅಲ್ಲಿಯ ಕಾವಲುಗಾರನಿಗೆ ಏನು ಕೊಡಬೇಕೋ ಕೊಟ್ಟು 'ಕ್ಯೂ'ದಲ್ಲಿ ನಿಂತಿರಿ, ಎಂದರೆ ಬಿದ್ದಿರ್ರಿ. ಅಲ್ಲಿ ಮಾತ್ರ ನಿಮಗೆ ವಿದ್ಯುತ್ ಪೂರೈಸಲಾಗುವುದು.

... ಹಾಂ ನಿಮ್ಮ ಕರ್ಮಾದಿಗಳು ಮುಗಿದ ನಂತರ, ವೈಕುಂಠ ಸಮಾರಾಧನೆಯ ಸ್ವೀಟ್ಸ್ ನಮಗೆ ಕಳಿಸಲು ಮರೆಯಬೇಡಿ, ಧನ್ಯವಾದಗಳು.

ಗ್ರಾ : (ಕಳಿಸಿದೆ)

★★★

‘ಕೊರವಂಜಿಯಿಂದ’

ನಾನೂ ನನ್ನ ಕುದುರೆಯೂ

– ನಾ. ಕಸ್ತೂರಿ

ಇಪ್ಪತ್ತು ವರ್ಷದಿಂದ ಹೊಡಿಯುತ್ತಾ ಇದೇನೆ, ಸಾಮಿ, ಗಾಡೀನ. ಅಯ್ಯೋ, ಆಯ್ಯೋ, ಅಯ್ಯೋ! ಎಂಥೆಂಥ ಜನ ಇದಾರೆ, ಅಂತೀರಿ, ಈ ಬೆಂಗಳೂರಲ್ಲಿ? ಅಲ್ಲಿ ಕೂರಿಸಿ ಇಲ್ಲಿ ಇಳಿಸುವುದರೊಳಗೆ ಅವರು ಆಡೋ ಆಟ, ಮಾಡೋ ಮಾಟ... ಛೆ! ಛೆ! ಛೆ! ಒಬ್ಬರೇ ಕೂತಿದ್ದರೆ, ಸೂಟಿನವರು, ಕರೀದೊರೆಗಳು, ತಲೆ ತಗ್ಗಿಸಿಕೊಂಡು ಬಿಂ ಅಂತ ಬಿಗಿ ಮೇಲಿರುತ್ತಾರೆ, ತಿರುಗಬೇಕಾದ ಕಡೆ ಕೂಡ ತುಟಿ ಅಲ್ಲಾಡಿಸೋದಿಲ್ಲ. ಕಡೆಗೆ ಇಲ್ಲಿಗೇಕೋತಂದೆ ಅಂತ ನಮ್ಮ ಮೇಲೆ ಇಂಗ್ಲೀಷು ಬಿಡುತ್ತಾರೆ. ರುಮಾಲಿನವರಾದರೆ ಅತ್ತ ಕಡೆ ಇತ್ತ ಕಡೆ ಅಂತ ಎರಡು ಮುತ್ತು ಉದುರಿಸುತ್ತಾರೆ. ಗಾಂಧಿಟೋಪಿಯವರು ಬಿಡಿ-ಸದಾ ನಮ್ಮ ಬೆನ್ನು ಕೆರೆಯುತ್ತಾ ಉದ್ದಕ್ಕೂ ಹುರುಳಿ ಬೆಲೆ, ಸಾಹುಕಾರರಿಗೆ ಕೊಡೋ ಬಾಡಿಗೆ ಪೋಲೀಸಿನವರಿಗೆ ಕೊಡೋ ಜನರು ಅಂತ ಕಷ್ಟನಷ್ಟ ವಿಚಾರಿಸಿ ಕುದುರೆ ಎಲುಬೆಲ್ಲ ಎಣಿಸುತ್ತಾರೆ. ಅಂಥಾವರು ನಿಟ್ಟುಸಿರು ಬಿಟ್ಟುಕೊಂಡು ಚಿಲ್ಲರೆ ಇಲ್ಲವಲ್ಲೋ ಅಂತ ತಲೆ ಕೆರೆದರೆ, ತಣ್ಣಗಿರಪ್ಪ ಮಾರಾಯ ಅಂತ ನಾನೂ ತೆಪ್ಪಗಾಗುತ್ತೇನೆ.

ಗಂಡ ಹೆಂಡತಿ ಕೂತುಬಿಟ್ಟರೆ, ಒಸಗೆಯಾದ ಹೊಸದರಲ್ಲಿ, ಪಕ್ಕೆಚುಚ್ಚಿಕೊಂಡು ಕಲಕಲ ಅಂತ ದಾರಿ ತುಂಬ ನಕ್ಕಿದ್ದೂ ನಕ್ಕಿದ್ದೆ. ಪಾಪ, ಎಷ್ಟು ದಿನ ನಕ್ಕಾರು. ನಾನೂ ಕೂಡ ಅವರನ್ನ ಮುಂಭಾರ ಹಿಂಭಾರ ಅಂತ ಪೀಡಿಸೋದಿಲ್ಲ. ನನ್ನ ಷಾದೀ ವ್ಯಾಧಿ ನೆನೆದುಕೊಳ್ಳುತ್ತಾ ಅವರ ಲಲ್ಲೆ ಕಿವಿ ಮೇಲೆ ಬೀಳದೆ ಇದ್ದವನ ಹಾಗೆ ನನ್ನ ಪಾಡಿಗೆ ನಾನು ಕುದುರೆ ಬಾಲ ತಿರುಚುವೆ. ಮೂವತ್ತು ಮೂವತ್ತೈದರ ಕಪೋತ ಕಪೋತಿಯರಾದರೆ ಸರಿ, ಮಾತಿನಲ್ಲಿ ಗೆಲುವೇ ಇರೋದಿಲ್ಲ. ಮಕ್ಕಳ ನಾಯಿಕೆಮ್ಮುಲು ಬೇರೆ. ಸಾಲ ಸಂಬಳ ವರ್ಗ ಜಾತಕ ಸೌದೆ ತಾಯಿತೆ ಬಾಡಿಗೆ ಅಂತ ಒಳಗೆ ಕೂತುಕೊಂಡು ಒಟಗುಟ್ಟುತ್ತಾರೆ. ಸರ್ಕಾರ ಸಾಹೇಬರು ಅಂತ ಗೊಣಗುಟ್ಟುತ್ತಾರೆ. ಅತ್ತೆ ಸೊಸೆ ಹತ್ತಿಬಿಟ್ಟರಂತೂ, ಗಾಡಿ ಗಾಡೀನೇ ಮಗುಚಿ ಹೋಗುತ್ತೆ, ಅವರು ಆಡೋ ಛೀಮಾರಿಯಿಂದ, ಜೊತೆಗೆ ಹೆಂಗಸರಿದ್ದರೆ, ಗಂಡಸರು ನಮಗೆ ಕೊಡೋದು ಹೇಳಿದಷ್ಟೇ ಬಾಡಿಗೆ... ಅವರೆದುರು ನಮ್ಮ ಜಾಣತನ ತೋರಿಸೋದಕ್ಕೆ ಅಂತ, ಗಂಡಸರು ದಾರಿ

ಉದ್ದಕ್ಕೂ ಲೈಸನ್ಸು ಮುನಿಸಿಪಲ್ ಲಿಸ್ಟು ಪೋಲೀಸು ಮಾಮೂಲು ಅಂತ ಬೆದರಿಸುತ್ತಾರೆ. ಅದಕ್ಕೆ ನಾವೂ ಉಪಾಯ ಮಾಡುತ್ತೇವೆ: ಸ್ಟೇಷನಿಂದಲೇ ಪ್ರಾರಂಭಿಸುತ್ತೇವೆ, ನಮ್ಮ ಪುರಾಣಾನ. ''ಇಂಥದ್ದೇ ಒಂದು ಮಗಳಿದ್ದಳು, ತಾಯಿ, ನನಗೂನೂ. ಇಸ್ಕೂಲಿಗೆ ಕಳಿಸ್ತಾ ಇದ್ದೆ, ತಾಯಿ... ಈಗ ಬದುಕಿದ್ದರೆ ನಿಮ್ಮ ಹಾಗೆ ಅವಳೂನೂ ಗಂಡನ ಜೊತೆಗೆ ಮೂರು ಮಕ್ಕಳನ್ನೂ ಕಟ್ಟಿಕೊಂಡು ಅತ್ತೆ ಮನೆಗೆ ಹೋಗುತ್ತಿದ್ದಳು... ಈ ಮಗುವಿನಷ್ಟು ಇದ್ದಾಗಲೇ ಹುರುಳಿ ಬೇಯಿಸುವವಳು. ಅವಳ ಕೈಗುಣದಲ್ಲಿ ಕಲ್ಲೂಕೂಡ ಬೆಂದು ಬೆಣ್ಣೆ ಹಂಗಾಗುವುದು. ಈ ಕುದುರೆ ಮೇಲೇನೇ ಕೂರಿಸಬೇಕಪ್ಪ ನನ್ನ ಗಂಡನನ್ನ ವರ ಪೂಜೇಲಿ ಅಂತ ಅನ್ನೋಳು. ಹೊರಟುಹೋಗಿಬಿಡ್ತು'' ಅಂತ ಕಣ್ಣೊರಸಿಕೊಂಡು ಕನ್ನಡಿಯಲ್ಲೇ ಕೊರಗುವೆ... ನಾಲ್ಕಣೆ ಹೆಚ್ಚಾಗಿ ಕೊಡಿ, ಪಾಪ, ಒಳ್ಳೇವನು, ಅಂತ ಅನ್ನೋರು, ತಾಯಿ. ನಾನೇ ಮಗೂನ ಗಾಡಿಯಿಂದಿಳಿಸುವೆ.

ಥರ ಥರಾ ಜನರು ಕೂತಿದಾರೆ, ಸಾಮಿ, ಈ ಗಾಡೀಲಿ, ತಮ್ಮ ತಮ್ಮ ಭಾವಮೈದ ಅಳಿಯ ಸೋದರಳಿಯ ಇವರಿಗೆ ಒಳ್ಳೇ ಹುಲ್ಲು ತಿನ್ನಿಸಿ ಮಾಲೀಸ್ ಮಾಡಿ ಜೇನೀಸ್ ಹಾಕಿ ಜೊತೆಯಲ್ಲೇ ಕೂರಿಸಿಕೊಂಡು, ಮೂರು ನಾಲ್ಕು ತಟ್ಟೆ ತುಂಬ ಸೇಬು, ದ್ರಾಕ್ಷಿ, ಕಿತ್ತಲೆ ಮಾದಲ ದಿಂಡಿನಹಾರ ಸಮೇತ ಚಾಕರಿ ಕೊಡಿಸಪ್ಪ ಅಂತ ಹಲ್ಲು ಕಿರೀತಾ ಭಾರಿ ಭಾರೀ ಸಾಹೇಬರ ಬಂಗಲೆ ಮುಂದಕ್ಕೋಡಿಸುತ್ತಾರೆ. ನನ್ನ ಗಾಡಿ ನಶೀಬಿನ ಗಾಡಿ, ಸಾಮಿ! ಮಂತ್ರಿ ಚಾಕರಿ ಕೂಡ ಕೊಡಿಸಿಕೊಡುತ್ತದೆ, ಇವತ್ತು ನರೀಮುಖ ಕಂಡೇಕಾಣುತ್ತೀರಿ, ಒಂದು ಕಿತ್ತಲೆ ಹಣ್ಣು ಕೊಡಿ ಖಾಯಿಲೆ ಮಗು ಇದೆ ಮನೇಲಿ, ಅಂದ್ರೆ, ಕೊಟ್ಟೇ ಕೊಡೋರು. ಆ ಮೇಲೆ, ಹೊರಗೆ ಬಂದು ಮತ್ತೆ ಹತ್ತುತ್ತಲೂ, 'ಆ ಪಾಪಿಗೆ ಕೊಟ್ಟಿದ್ದನ್ನ ನಿನಗಾದರೂ ಕೊಟ್ಟಿದ್ದರೆ, ಪುಣ್ಯ ಬರುತ್ತಿತ್ತು' ಅಂತ ಬಂಗಲಿಯವರನ್ನ ಬೈಬಾರದ ಮಾತಿನಲ್ಲೇ ಬೈಯುವರು. ಕಡೆಗೆ ಛತ್ರದಹತ್ರ ಬಾಡಿಗೆಗೆ ತಕರಾರು, ಪಂಚಾಯಿತಿ, ಚೌರ.

ಎಷ್ಟೋ ಸಲ, ನಾವೇ ಬಾಡಿಗೆ ಬಿಟ್ಟುಬಿಡುತ್ತೇವೆ. ಆಸ್ಪತ್ರೆಗೆ ಅಂತ ಹೋಗುವಾಗ, ಬೇರೆ ಕಡೆ ತಿರುಗಿಸೋ ತಾಪತ್ರಯ ಬಂದರೆ, ಏನು ಕೇಳೋದು, ಯಾರ ಹತ್ರ ಕೇಳೋದು? ನಮ್ಮ ನಶೀಬು ಅಂತ ಕೊರಡಾದಿಂದ ಕುದುರೆ ಬೆನ್ನಮೇಲೆ ನಾಲ್ಕು ಚಚ್ಚಿಕೊಳ್ಳುವೆ... ಮೊನ್ನೆ ಯಾವುದೋ ಮುತ್ತೈದೆ ಗಂಡ

ಬೇರೆ ಕೂತಿದ್ದ ಪಕ್ಕದಲ್ಲಿ. ನೀವು ಬೇರೆ ಮದುವೆ ಮಾಡಿಕೊಳ್ಳಿ, ಒಂಟಿಯಾಗಿ ಇರೋದು ಅಪಾಯ. ಮಾತುಕೊಡಿ ನನಗೆ, ಈಗಲೇ ಅಂತ ಹಠ ಹಿಡಿದರು. ಭೂಪ, ಕೊಟ್ಟ ಮಾತು ಇನ್ನು ಕೆಲವರಿದಾರೆ. ನಂಟರ ಮನೆಗೆ ಬರುವವರು, ಬಸ್ ಸ್ಟಾಂಡಿಂದ. ಬಾಡಿಗೆ ತೆತ್ತು ನಮ್ಮನ್ನತ್ತಲಾಗೆ ಕಳಿಸಿ ಕಾಲು ತೊಳೆಯದೆ, ಚೀಲ ಚೊಂಬು ಹಿಡಿದು ನೆಟ್ಟಗೆ ಆ ಮನೆಗೆ ನುಗ್ಗಿಬಿಡ್ತಾರೆ. ನಾವು ಕಣ್ ಕಣ್ ಬಿಡ್ತಾ ಕಿಟಕಿಯಿಂದ ಇಣಿಕಬೇಕು. ಒಳಗೆ ಮರಾಮಾರಿ ಆಗ್ತಿರ್ತದೆ. 'ನಿಮಗೆ ಭಾಗ ಕೊಡೋದಿಲ್ಲ' 'ನೀವು ಉಡುಗೊರೆ ಕೊಟ್ಟ ಸೀರೆ ಬಣ್ಣ ಹೋಯಿತು', 'ನಮ್ಮ ಮನೆ ಹೆಣ್ಣನ್ನ ಭಾವಿಗೆ ತಳ್ಳುತ್ತೇವೆ', 'ನಿಮಗೆ ಕಾಗದ ಬರೆದದ್ದು ನಾವಲ್ಲ, ನಮ್ಮ ಚಿಕ್ಕಪ್ಪ' ಅಂತ ರಾಮಾಣ್ಯ ತೆಗೆಯುತ್ತಾರೆ. ಸರಿ! ''ಕೇ.ಪಿ.ಸಿ. ಆಫೀಸಲ್ಲೇ ಬಿಟ್ಟುಬಿಡೋ ಅಣ್ಣ'' ಅಂತ ಕೂಗಾಡಿಕೊಂಡು ಆತ ಹೊರಗೆ ಬರುತ್ತಾನೆ. ಕೊಂಕುಳಲ್ಲಿ ಪುಟ್ಟ ಕೂಸು, ಕೈಯಲ್ಲಿ ಬಟ್ಟೆ ಚೀಲ ಸಹಿತ ಆಕೇನೂ ಬರುತ್ತಾಳೆ'' ಯಾವ ಜಾತಿಯವರು, ಸಾಮಿ, ಇವರು?'' ಅಂತ ಸಮಾಧಾನ ಹೇಳಿಕೊಂಡು ನಾನು ಮತ್ತೆ ಅದೇ ಜಾಗಕ್ಕೆ ಬಿಟ್ಟಿ ಹೊಡೆಯುವೆ.

ಯುದ್ಧ ನಿಂತದ್ದರಲ್ಲಿ ನಮಗೆ ಸಮಾಧಾನವೇ ಇಲ್ಲ. ಆಗ ಒಂದು ದಿನ ನಾಲ್ಕು ಜನ ಬಂದರು, ಚೌಕಕ್ಕೆ. ಐದು ರೂಪಾಯಿ ಬಾಡಿಗೆ, ಅಂದೆ. ತಕೊ ರಾಜ, ಅಂತ ಒಳಗೆ ತೂರಿಕೊಂಡರು. ನಾಲ್ಕು ಜನರಿಗೂ ಕಂಠಪೂರ್ತಿ, ಚಾವಟಿ ಚಳೀರ್ ಚಳೀರ್ ಅಂತ ಸದ್ದು ಮಾಡುತ್ತಲೇ ಇರಬೇಕಾಗಿತ್ತು ಅವರಿಗೆ. ಅಯ್ಯೋ ಹಯಗ್ರೀವಾ! ಅಂತ ಒಳಗೆ ಕುದಿಯುತ್ತಾ, ನಾನು ಬೀರುತ್ತಲೇ ಇದ್ದೆ. ಇದ್ದಕ್ಕಿದ್ದ ಹಾಗೆ ಅವರಿಗೆ ಕನಿಕರ ಹುಟ್ಟಿತು. ಯಾಕೆ ಹೊಡೀತಿಯಾ ಕುದುರೇನ, ಅಂತ ನನ್ನನ್ನ ಬೈದರು. ನಾಲ್ಕು ಜನರೂ ಕೆಳಕ್ಕಿಳಿದರು. ಕುದುರೆಯನ್ನ ಬಿಚ್ಚಿ ಒಳಗೆ ತುರುಕಿದರು. ನನ್ನನ್ನೂ ಅದರ ಹತ್ರ ಕೂರಿಸಿದರು. ತಾವೇ ಗಾಡೀನ ಎಳೆದು ಮುಂದಕ್ಕೆ ಸಾಗಿಸಿದರು - ತೂರಾಡುತ್ತಾ ಪೂರಾಡುತ್ತಾ, ತಮ್ಮ ಬಿಡಾರದ ತನಕ. ಅಲ್ಲಿ ಕೂಲಿಯ ಮಾತು ಬಂದಾಗ-ನಾನು ಐದು ರೂಪಾಯಿ, ಅಂದೆ. ಸರಿ, ಎಂದು ಒಬ್ಬೊಬ್ಬರೂ ಐದೈದು ರೂಪಾಯಿ ನನ್ನ ಕೈಲಿಟ್ಟರು. ನನಗೂ ಕುದುರೆಗೂ ಬಹಳ ಸಂತೋಷವಾಯಿತು. ಬಹುಶಃ ಬೆಂಗಳೂರಿನಲ್ಲಿ ಬೇರೆ ಒಬ್ಬ ಗಾಡಿಯವನಿಗೂ ಇಂಥ ಅನುಭವ ಆಗಿರಲಾರದು.

★★★

ಮೇರಾ ಭಾರತ್ (ನಿಜಕ್ಕೂ) ಮಹಾನ್

– ಶಿವು

ವರ್ಲ್ಡ್ ಕಪ್ಪಿನಲ್ಲಿ ಭಾರತ ಶ್ರೀಲಂಕಾಕ್ಕೆ ಉಂಡೆಗಳನ್ನು ತಿನ್ನಿಸುತ್ತಿದ್ದ ಸಂಜೆ. ನಮ್ಮ ಕ್ಲಬ್ಬಿನ ಮೇಯ್ನ್ ಹಾಲಿನಲ್ಲಿದ್ದ ಟಿ.ವಿ.ಯ ಮುಂದೆ ಸದಸ್ಯರು ಗೊಂಚಲು ಗೊಂಚಲಾಗಿ ಕುಳಿತು ಹುಯಿಲೆಬ್ಬಿಸಿದ್ದರು. ಗಂಗೂಲಿ ಒಂದೊಂದು ಬೌಂಡರಿ ಬಾರಿಸಿದಾಗಲೂ ಎಲ್ಲರೂ ಬಲಗೈ ಮುಂದೆ ಚಾಚಿ ಎಡದಿಂದ ಬಲಕ್ಕೆ ಅಲೆ ಅಲೆಯಾಗಿ ಬೀಸಿ ತಮ್ಮ ಮೆಚ್ಚುಗೆ ತೋರುತ್ತಿದ್ದ ರೀತಿ ಬಹು ಮೋಜಿನದಾಗಿತ್ತು. ಈ ಎಲ್ಲ ಗಲಾಟೆಯನ್ನು ತಪ್ಪಿಸಿಕೊಳ್ಳಲು ನಮ್ಮ ಗೆಳೆಯರ ಗುಂಪು ಕ್ಲಬ್ಬಿನ ಎರಡನೇ ಮಹಡಿಯ ನಾಲ್ಕನೇ ರೂಮಿನಲ್ಲಿ ಅಡಗಿ ಕುಳಿತು ಟೈಮ್ ಪಾಸ್ ಮಾಡುತ್ತಿದ್ದರು. ಭಾರತದ ಇನ್ನಿಂಗ್ಸ್ ಮುಗಿದ ತಕ್ಷಣ ನಾನೂ ಮೇಲಿನ ರೂಮು ಸೇರಿದೆ.

''ಉಮಾ ಭಾರತೀನ ಇಟಲೀಗೆ ಪ್ರಧಾನಿ ಮಾಡಲು ಹೊರಟಷ್ಟೇ ನಾಚಿಗೆಗೇಡಿನ ವಿಷಯ ಇದು. ತೀರಾ ಅನ್ಯಾಯ'' ರೆಡ್ಡಿ ಎಂದಿನಂತೆ ತನ್ನ ಚೆಡ್ಡಿಚಿಂತನೆ ಮುಂದಿಟ್ಟ.

''ಸೋನಿಯಾ ತನ್ನ ಹಿಂದಿ ಭಾಷಣಾನ ರೋಮನ್ ಸ್ಕ್ರಿಪ್ಟ್‌ನಲ್ಲಿ ಬರೆದುಕೊಂಡು ಅಕ್ಷರಗಳನ್ನು ಹುಡುಕಿ ಹುಡುಕಿ ಓದುತ್ತಿದ್ದುದನ್ನು ನೋಡಿ ನನಗೆ ಅಯ್ಯೋ ಪಾಪ ಅನ್ನಿಸಿತು. ಆಕೆ ಸರಾಗವಾಗಿ ತನ್ನ ಮಾತೃಭಾಷೆಯಲ್ಲೇ ಭಾಷಣ ಮಾಡಿ ನರಸಿಂಹರಾವ್ ಅದನ್ನ ಹಿಂದಿಗೆ ತರ್ಜುಮೆ ಮಾಡಿದ್ದರೆ (ಪಿ.ವಿ. ಎನ್.ಗೆ ಇಟಾಲಿಯನ್ ಬರುತ್ತಂತೆ). ಎಫೆಕ್ಟ್ ಇನ್ನೂ ಚೆನ್ನಾಗಿ ಇರ್ತಿತ್ತೇನೋ. ದೇಶದ ನಾಯಕಿ ಆಗಬೇಕಾದೋಳು ಪ್ರಜೆಗಳೊಂದಿಗೆ ಮಾತನಾಡೋವಾಗ ಐ ಕಾಂಟಾಕ್ಟ್ ಅತಿ ಮುಖ್ಯ...'' ರಾಜು ನಮ್ಮ ಗುಂಪಿನ ಲ್ಯಾಟೆರಲ್ ಥಿಂಕರ್.

''ರಾಜು, ನಿನ್ನ ಸಿಂಪಥಿ ಮಿಸ್ ಪ್ಲೇಸ್ಡ್ ಕಣೋ. ಆ ಸಭೆಯಲ್ಲಿದ್ದೋರಿಗೆ ಆಕೆ ಹಿಂದಕ್ಕೆ ಬಂದು ಅಧ್ಯಕ್ಷ ಪದವಿ ವಹಿಸಿಕೊಂಡ್ರೆ ಸಾಕು ಅನ್ನಿಸಿತ್ತು. ಭಾಷಣ, ಗೀಷಣ ಏನೂ ಬೇಕಾಗಿರಲಿಲ್ಲ ಅವರಿಗೆ. ಅದಿರ್ಲಿ, ನನಗಂತೂ ಇಷ್ಟು ವರ್ಷ ಈ ದೇಶದಲ್ಲಿದ್ದರೂ ಇಲ್ಲೀ ವಿಷಯ ಅರ್ಥಾನೇ ಆಗ್ತಾ ಇಲ್ಲ. ಒಂದ್ಕಡೇ ಈ ರಾಜಕಾರಣಿಗಳು ತಮ್ಮ ಅಸಂಗತ ನಾಟಕದಲ್ಲಿ ಮುಳುಗಿದ್ದರೆ, ಇನ್ನೊಂದು ಕಡೆ ನಮ್ಮ ಜನತೆ ಈ ಕ್ರಿಕೆಟ್ ಹುಚ್ಚು. ಆ ಕಡೆ ಪಾಕೀಸ್ತಾನದೋನೋ ಕಾರ್ಗಿಲ್ ನಲ್ಲಿ ನಮ್ಮ ವಿಮಾನಗಳನ್ನ ಸುಟ್ಟು ಭಸ್ಮ ಮಾಡ್ತಿದಾನೆ. ಯಾರಿಗೂ ದೇಶದ ಆರ್ಥಿಕ

ಆರೋಗ್ಯದ ಬಗ್ಗೆ ಕಾಳಜೀನೇ ಇರೋಹಾಗಿಲ್ಲ. ಪ್ರಪಂಚದ ಇನ್ಯಾವ ದೇಶದಲ್ಲೂ ಇಂಥಾ ವಿಚಿತ್ರ ಕೊಲಾಜ್ ಕಾಣಸಿಗುಲ್ಲ ಅನ್ಸುತ್ತೆ ನನಗೆ...'' ನಮ್ಮ ವಿಷುಗೆ ಸ್ವಲ್ಪ ವಂಡರ್ ಗಣ್ಣು. ಅದಕ್ಕೇ ಅವ ಯಾವಾಗ್ಲೂ Perpetual Wonderment ನಲ್ಲೇ ಇರ್ತಾನೆ.

''ಕೊಲಾಜ್ ಅಂದ್ರೆ ಏನೋ?'' ಶಾಮುವಿನ ಮುಗ್ಧ ಪ್ರಶ್ನೆ.

ಅಷ್ಟು ಹೊತ್ತಿಗೆ ನಮ್ಮ ರೂಮಿನ ಬಾಗಿಲು ತೆರೆಯಿತು. ದೇವು ಎಂದಿನಂತೆ ಗಂಭೀರವಾಗಿ ಪ್ರವೇಶಿಸಿ ತನ್ನ ಸೋಫಾದಲ್ಲಿ ಆಸೀನನಾದ ಬೇರರ್ ಜೋಸೆಫ್ ಬಂದು ಅವನಿಗೆ ಪಾನೀಯವನ್ನು ಒದಗಿಸುವವರೆಗೂ ಸಭೆಯಲ್ಲಿ ಒಂದು ರೀತಿಯ ಸ್ನಿಗ್ಧ ಮೌನ ನೆಲೆಸಿತ್ತು.

ಶಾಮಣ್ಣಾ, ನಾನು ಹೇಳ್ತೀನಿ ಕೇಳು. ಕೊಲಾಜ್ ಅಂದ್ರೆ, ಬೇರೆ ಬೇರೇ ಚಿತ್ರಗಳ ಭಾಗಗಳನ್ನ ಒಂದುಗೂಡಿಸಿ ಒಂದು ಹೊಸ ಚಿತ್ರ ಮಾಡೋದು. ಕಲೆಗಾರನಲ್ಲಿ ಕಲಾವಂತಿಕೆ ಇದ್ರೆ, ಹೀಗೆ ಚೂರುಪಾರು ಸೇರಿಸಿ ತೇಪೇ ಹಾಕಿದ ಚಿತ್ರಕ್ಕೂ ಅರ್ಥ ಮೂಡುತ್ತೆ. ವಿಶು, ನಮ್ಮ ದೇಶದ್ದು ವಿಚಿತ್ರ ಕೊಲಾಜ್ ಅಂತ ನನಗೇನೂ ಅನ್ಸುಲ್ಲ.'' ದೇವು ತನ್ನ ಅಭಿಪ್ರಾಯ ಮಂಡಿಸಿದ. ವಿಷುಗೆ ಸ್ವಲ್ಪ ರೇಗಿತು. ''ವಿಚಿತ್ರ ಅಲ್ದೇ ಮತ್ತಿನ್ನೇನೋ. ಮೊದಲೇ ಹಂಗ್ ಪಾರ್ಲಿಮೆಂಟು. ಹ್ಯಾಗೋ ಒಂದು ಸರ್ಕಾರಾ ಅಂತ ನಡೆಸಿಕೊಂಡು ಹೋಗೋದು ಬಿಟ್ಟು, ಅದನ್ನ ಎಳೆದು ಹಾಕಿ ಕೋಟ್ಯಾಂತರ ರೂಪಾಯಿ ಖರ್ಚಿನಲ್ಲಿ ಮತ್ತೊಂದು ಚುನಾವಣೆ. ಅದರಲ್ಲೂ ಯಾರಿಗೂ ಸ್ಪಷ್ಟ ಬಹುಮತ ಬರೋ ಸೂಚನೆ ಇಲ್ಲ. ಯಾವ್ದೋ ಕತ್ತಲೆ ಸುರಂಗದಲ್ಲಿ ಸಿಕ್ಕಿಕೊಂಡುಬಿಟ್ಟಿದ್ದೇವೆ ನಾವೆಲ್ಲಾ.''

ದೇವು ನಿಧಾನವಾಗಿ ಒಂದು ಗುಟುಕು ಪಾನೀಯ ಹೀರಿ ಶುರುಮಾಡಿದ.

''ವಿಷು, ಈಗ ಸದ್ಯಕ್ಕೆ ನಾವೆಲ್ಲಾ ಕತ್ತಲೆ ಸುರಂಗದಲ್ಲಿ ಸಿಕ್ಕಿರಬಹುದು. ಆದರೆ ಸುರಂಗದ ಕೊನೇಲಿ ಬೆಳಕಿದೆ ಮಗೂ. ಅದನ್ನ ನೋಡೋ ಕಣ್ಣು ಬೇಕು. ಅರ್ಥಮಾಡಿಕೊಳ್ಳೋ ಬುದ್ಧಿ ಬೇಕು ಅಷ್ಟೇ.''

''ಅಂದ್ರೇ, ಮುಂದಿನ ಚುನಾವಣೇಲಿ ಯಾವ್ದಾದ್ರೂ ಒಂದು ಪಕ್ಷಕ್ಕೆ ಸ್ಪಷ್ಟ ಬಹುಮತ ಬರುತ್ತೇ ಅಂತೀಯಾ?''

''ಖಂಡಿತಾ ಇಲ್ಲ. ಮುಂದಿನ ಚುನಾವಣೆ ನಡೀಲೇಬಾರ್ದು ಅಂತೀನಿ. ಈಗ ನಾವು 'ಜಗತ್ತಿನಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ' ಅಂತೆಲ್ಲಾ ಕೊಚ್ಚಿಕೊಂಡು ನಡೆಸೋ ಚುನಾವಣೆಯಲ್ಲಿ ಮತದಾನ ಮಾಡೋರು ಎಷ್ಟು ಗೊತ್ತೇ. ಕೇವಲ ಐವತ್ತು ಪರ್ಸೆಂಟ್. ನಿಜ ಹೇಳಬೇಕು ಅಂದ್ರೆ, ಜನಗಳಿಗೆ ಈ ಚುನಾವಣೆಗಳಲ್ಲಿ ನಂಬಿಕೇನೇ ಹೊರಟು ಹೋಗಿದೆ. ಈಗ ಈ ಚುನಾವಣೆಗಳ ಜಾಗದಲ್ಲಿ ಬೇರೆ ಒಂದು ಅತಿ ಜನಪ್ರಿಯ ಆಯ್ಕೆಯ ವಿಧಾನ ತರದೇ ಬೇರೇ ಮಾರ್ಗವೇ ಇಲ್ಲ...''

"ಏನದು ಆ ಮಾರ್ಗ? ಮೂರನೆಯ ಕ್ಲಾಸಿನಲ್ಲಿ 'ತಿರುಕನ ಕನಸು' ನಲ್ಲಿ ಬರುತ್ತಲ್ಲಾ ಹಾಗೆ, ಯಾವ್ದಾದರೂ ಒಂದು ಆನೆ ಸೊಂಡಿಲಿಗೆ ಒಂದು ಹಾರಾ ಸಿಕ್ಕಿಸಿ, ಊರಲ್ಲೆಲ್ಲಾ ಸುತ್ತಾಡಿಸಿ, ಅದು ಯಾರ ಕೊರಳಿಗೆ ಮಾಲೆ ಹಾಕುತ್ತೋ ಆಕೇನೇ ಹಿಡಿದು ನೀನೇ ನಮ್ಮ ರಾಣಿ ಅನ್ನೋದೇ..." ಶೆಣೈ ತನ್ನ ಸ್ಕಿಂಟಿಲೇಟಿಂಗ್ ವಿಟ್ ಪ್ರದರ್ಶಿಸಹೊರಟ.

"ಅದೂ ಆಗಬಹುದು. ಆದ್ರೆ ಅದರಲ್ಲಿ ಅನೇಕ ಪ್ರಾಕ್ಟಿಕಲ್ ತೊಂದರೆಗಳಿವೆ. ಆನೆ ಯಾವ ಪಕ್ಷದ್ದೂ ಅನ್ನೋದನ್ನ ಮೊದಲು ಚುನಾವಣೆ ಮೂಲಕ ನಿರ್ಧರಿಸಿ ಆಮೇಲೆ ಅದರಿಂದ ಮಾಲೆ ಹಾಕಿಸಬೇಕಾಗುತ್ತೆ. ಊಹುಂ. ನಾನು ಹೇಳಹೊರಟಿರೋದು Tried and trusted ಮೆಥೆಡ್. ಈ ಸಂಜೆ ಈ ರೂಮಿಗೆ ಬರ್ತಾ ದಾರೀಲಿ ಮೇಯ್ನ್‌ಹಾಲ್ ಹಾದು ಬರ್ತಿದ್ದಾಗ ಹೊಳೀತು ನೋಡಿ ನನ್ನ ಬ್ರೈನ್ ವೇವ್..."

"ಏನದು ನಿನ್ನ ಬ್ರೈನ್ ವೇವ್?"

"ಕ್ರಿಕೆಟ್. ಈಗ ವರ್ಲ್ಡ್‌ಕಪ್ ನೋಡಿ. ಯಾವ ಟೀಮ್ ಅತ್ಯುತ್ತಮ ಅನ್ನೋದನ್ನ ಎಷ್ಟು ಸರಾಗವಾಗಿ ನಿರ್ಧರಿಸ್ತಾ ಇದ್ದಾರೆ. ಒಂದು ಹಂಗ್ ಡಿಸಿಷನ್ ಇಲ್ಲ. ಒಂದು ಅವಿಶ್ವಾಸ ನಿರ್ಣಯ ಇಲ್ಲ. ಜೂನ್ ಇಪ್ಪತ್ತಕ್ಕೆ ಒಂದೇ ಒಂದು ಟೀಂ ವರ್ಲ್ಡ್ ಛಾಂಪಿಯನ್ಸ್. ನಮ್ಮ ದೇಶದ ನಾಯಕರನ್ನ ಇದೇ ರೀತಿ ಬಹು ಸುಲಭವಾಗಿ ಯಾಕೆ ಆರಿಸಬಾರ್ದು ಅಂತ ಅನ್ನಿಸ್ತು ನನಗೆ. ಹೇಗಿದ್ರೂ ಈಗ ಟೂ ಪಾರ್ಟಿ ಸಿಸ್ಟಮ್ ಜಾರಿಗೆ ಬಂದೇ ಇದೆ. ನ್ಯಾಷನಲ್ ಡೆಮೊಕ್ರಾಟಿಕ್ ಅಲಯನ್ಸ್ ನೋರ್ನೆಲ್ಲಾ ಕಲೆಹಾಕಿ "ಡೆಮೋಕ್ರಾಟಿಕ್ ಇಲವೆನ್" ಅಂತ ಒಂದು ಟೀಮ್ ಮಾಡಿ, "ಸೆಕ್ಯುಲರ್ ಇಲವೆನ್" ಜೊತೆ ಒಂದು ಕ್ರಿಕೆಟ್ ಮ್ಯಾಚ್ ನಡೆಸಿದ್ರೆ, ಶತಾಂಶ ನೂರರಷ್ಟು ಜನ ಟಿ.ವಿ.ಗಳ ಮುಂದೆ ಕುಳಿತು ಭಾಗವಹಿಸ್ತಾರೆ. ಕೋಟ್ಯಾಂತರ ರೂಪಾಯಿ ಖರ್ಚೂ ಇರೋದಿಲ್ಲ."

"ಅಂಪೈರ್ ಯಾರು?"

"ಇನ್ಯಾರು? ನಮ್ಮ ಗಿಲ್ ಸಾಹೇಬರನ್ನೇ ಬಿಳೀ ಕೋಟ್ ತೊಡಿಸಿ ನಿಲ್ಲಿಸಿದರಾಯ್ತು. ಒಂದು Bright Sunny Sunday Morning. ಮ್ಯಾಚ್ ರೆಫರಿ ಕೆ.ಆರ್.ಎನ್. ಟಾಸ್ ಮಾಡಲು ಐದು ರೂಪಾಯಿ ನಾಣ್ಯ ಹಿಡಿದು ನಿಂತಿದಾರೆ. ಒಂದು ಕಡೆ ಶುಭ್ರವಾದ ಬಿಳೀ ಜುಬ್ಬ, ಕಚ್ಚೆ ಪಂಚೆ, ನೆಹ್ರೂ ವೆಸ್ಟ್ ಧರಿಸಿ ಫೀಲ್ಡ್‌ಗೆ ಇಳಿದಿರುವ ಕ್ಯಾಪ್ಟನ್ ವಾಜಪೇಯಿ, ಇನ್ನೊಂದು ಬದಿ ಟ್ರಿಮ್ಮಾಗಿ ಬಿಳೀ ಫ್ಲಾನಲ್ ಜೀನ್ಸ್ ಟೀ ಷರ್ಟ್ ಧರಿಸಿ ಸೋನಿಯಾ. ನಾಣ್ಯ ಚಿಮ್ಮಿದೆ. ಸೋನಿಯಾ "ಟೇಲ್" ಎಂದು ಕೂಗುತ್ತಾರೆ.. ತಕ್ಷಣ ಅವರ ಸಾವಿರಾರು

ಹಿಂಬಾಲಕರು, ತಮ್ಮ ನಾಯಕಿ ತಮ್ಮನ್ನು ಕರೆಯುತ್ತಿದ್ದಾರೆಂದು ಬಗೆದು ಮೈದಾನಕ್ಕೆ ನುಗ್ಗುತ್ತಾರೆ. ಸೆಕ್ಯೂರಿಟಿ ಜನ ಅವರನ್ನೆಲ್ಲಾ ಲಾಠೀ ಛಾರ್ಜ್ ಮಾಡಿ ಹೊರಗಟ್ಟುವ ಹೊತ್ತಿಗೆ ಸೋನಿಯಾ ಟಾಸ್ ಗೆದ್ದಿರುವುದನ್ನು ಕಾಮೆಂಟೇಟರ್ಸ್ ಘೋಷಿಸುತ್ತಾರೆ. 'ಸೋನಿಯಾ ಗಾಂಧೀಕಿ ಜೈ'' ಎಂಬ ಕೂಗು ಆಗಸವನ್ನು ತುಂಬುತ್ತದೆ.

''ಮ್ಯಾಚ್ ಇನ್ನೇನು ಪ್ರಾರಂಭ. ಸೆಕ್ಯುಲರ್ ಇಲವೆನ್ನಿನ ಓಪನಿಂಗ್ ಪೇರ್ ಲಲ್ಲೂ ಮತ್ತು ರಾಬ್ರಿ ಮೈದಾನಕ್ಕೆ ಇಳಿದಾಗ ಯಾದವ್ ಸ್ಟ್ಯಾಂಡಿನಿಂದ ಜಯಘೋಷ ಮೊಳಗುತ್ತದೆ. ಅರೆ, ಇದೇನಿದು, ರಾಬ್ರಿ ಕೈಯ್ಯಲ್ಲಿ ವಿಚಿತ್ರವಾದ ಬ್ಯಾಟ್. ಓಹೋ ಅದು ಬ್ಯಾಟಲ್ಲ, ಬ್ರೀಫ್‌ಕೇಸ್. ಮೊದಲ ಚೆಂಡು ಅದ್ವಾನಿಯಿಂದ ರಾಬ್ರಿಗೆ. ರಾಬ್ರಿ ಬೀಸಿದ ಬ್ರೀಫ್ಕೇಸ್ ಚೆಂಡನ್ನ ನೇರವಾಗಿ ಡಡೀಪ್ ಥರ್ಡ್ ಮ್ಯಾನ್‌ಗೆ ಒಯ್ಯುತ್ತದೆ. ಮೂರು ರನ್. ಯಾದವರಿಂದ ಮತ್ತೆ ಕಿವಿ ಗಡಕಿಚ್ಚುವ ಜಯಘೋಷ. ಈಗ ಲಲ್ಲೂ ಸರದಿ. ಲಲ್ಲೂ ಕೈಯ್ಯಲ್ಲೂ ಸಹಾ ಬ್ರೀಫ್ಕೇಸ್ ಬ್ಯಾಟ್. ಗುಡ್ ಲೆಂಗ್ತ್ ಬಾಲ್. ಲಲ್ಲೂ ರಭಸದಿಂದ ಬ್ರೀಫ್‌ಕೇಸ್ ಬೀಸಿದಾಗ ಚೆಂಡು ಬ್ರೀಫ್‌ಕೇಸ್‌ನ ಲ್ಯಾಚ್ ಅನ್ನು ತಾಗಿ ನೇರವಾಗಿ ವಿಕೆಟ್ ಕೀಪರ್ ಕೈ ಸೇರುತ್ತದೆ. ಚೆಂಡು ಬಡಿದ ರಭಸಕ್ಕೆ ಬ್ರೀಫ್‌ಕೇಸ್ ಬಾಯಿತೆರೆದು, ಐನೂರು, ಸಾವಿರದ ಲಕ್ಷಾಂತರ ನೋಟುಗಳು ಹಕ್ಕಿಗಳಂತೆ ಗಾಳಿಯಲ್ಲಿ ಹಾರಾಡುತ್ತಾ ಪ್ರೇಕ್ಷಕರ ಮೇಲೆ ತುಂತುರು ತುಂತುರಾಗಿ ನೆಲೆಸುತ್ತವೆ. ಅದ್ವಾನಿಯ ''ಹೌಸ್ದಾಟ್'' ಕೂಗು, ಒಂದೇ ಕ್ಷಣದಲ್ಲಿ ಅನೇಕರಿಗೆ ಗರೀಬಿ ಹಟಾವ್ ಮಾಡಿದ ಲಲ್ಲೂವಿನ ಬೆಂಬಲಿಗರ ಜಯಘೋಷದಲ್ಲಿ ಯಾರಿಗೂ ಕೇಳದಾಗುತ್ತದೆ. ಲಲ್ಲೂ ಪೆವಿಲಿಯನ್ ಸೇರುತ್ತಿದ್ದಂತೆ ಒನ್ ಡೌನ್ ಬ್ಯಾಟ್ಸ್‌ಮನ್ ಡಾ|| ಜಯಲಲಿತಾ ಜಯರಾಂ ಕೇಪ್ ಹೊದ್ದು ಬರುತ್ತಿದ್ದಾರೆ. ಜಯಾ ಒಳ್ಳೇ ಧರ್ಮಾವರದ ಸೀರೆ ಉಟ್ಟು ವಿಕೆಟ್ ಮುಂದೆ ನಿಂತಿರುವ ಭವ್ಯ ದೃಶ್ಯ. ಅದ್ವಾನಿ ಎಸೆದ ಮೀಡಿಯಂ ಪೇಸ್ ಚೆಂಡು, ನೇರವಾಗಿ ಬಂದು ಅವರ ಕಾಲಿಗೆ ಬಡಿಯುತ್ತದೆ. ಸ್ಲಿಪ್ ನಲ್ಲಿನ ವಾಜಪೇಯಿ ''ಲೆಗ್... ಬಿಫೋರ್'' ಅಂತ ಕೂಗುತ್ತಾರೆ. ಅಂತಹ ತುರ್ತು ಸಮಯದಲ್ಲಿಯೂ ಸಹಾ ಪದಗಳ ನಡುವೆ Pause ಮಾಡುವುದನ್ನು ಆತ ಮರೆಯುವುದಿಲ್ಲ. ಅಂಪೈರ್ ಗಿಲ್ ''ವೈಡ್'' ಸಿಗ್ನಲ್ ಮಾಡುತ್ತಾರೆ. ಮತ್ತೊಂದು ಅದ್ವಾನಿ ಎಸೆತ. ಮತ್ತೊಮ್ಮೆ ಕಾಲಿಗೆ ಬಡಿತ. ಮತ್ತೆ ವಾಜಪೇಯಿ ಕೂಗು. ಗಿಲ್ ಮತ್ತೆ ವೈಡ್ ಸಿಗ್ನಲ್. ಮೂರು ಬಾರಿ ಈ ರೀತಿ ಆದಮೇಲೆ ಕ್ಯಾಪ್ಟನ್ ವಾಜಪೇಯಿ ಗಿಲ್ ಹತ್ತಿರ ಬಂದು ಕಂಪ್ಲೇನ್ ಮಾಡುತ್ತಾರೆ. ''ರೂಲ್ಸ್ ಪ್ರಕಾರ ಚೆಂಡು ವಿಕೆಟ್ ಆಚೆ ಎರಡು ಅಡಿ ದೂರದಲ್ಲಿ ಬಿದ್ದರೆ ಅದನ್ನ ವೈಡ್ ಅಂತ ಪರಿಗಣಿಸಬೇಕು'' ಎಂಬ ರೂಲಿಂಗ್ ನೀಡುತ್ತಾರೆ

ಗಿಲ್. ''ಚೆಂಡು ಆಫ್ ಸೈಡಿನಲ್ಲಿ ಬಿದ್ದಾಗಲೂ ನೀವು LBW ಕೊಡಲಿಲ್ಲ, ಇದು ನ್ಯಾಯವೇ'' ವಾಜಪೇಯಿ ಪ್ರಶ್ನೆ. ಅದಕ್ಕೆ ಗಿಲ್‌ರವರ ಕ್ಲಾಸಿಕ್ ಉತ್ತರ ''ಆಫ್ ಸೈಡಿನಲ್ಲಿ ಎರಡಡಿಯಿಂದ ಲೆಗ್ ಸೈಡಿನ ಎರಡಡಿಯವರೆಗೂ ಪುರಚ್ಚಿತಲೈವಿ ಹರಡಿದ್ದಾರೆ. ಹಾಗಾಗಿ ನನಗೆ ವಿಕೆಟ್ ಕಾಣದಾಗಿದೆ. ಇಂತಹ ಸಂದರ್ಭದಲ್ಲಿ ಬೆನಿಫಿಟ್ ಆಫ್ ಡೌಟ್ ಬ್ಯಾಟ್ಸ್‌ಮನ್‌ಗೇ'' ಈ ಎಲ್ಲ ಮಾತುಕತೆಗಳನ್ನೂ ಕೇಳಿಸಿಕೊಂಡ ಜಯಲಲಿತಾ ''I am deeply hurt'' ಎನ್ನುತ್ತಾ ಪೆವಿಲಿಯನ್‌ಗೆ ಹಿಂತಿರುಗುತ್ತಿದ್ದಂತೆ ಟೂ ಡೌನ್ ಬ್ಯಾಟ್ಸ್‌ಮನ್ ಸೋನಿಯಾ ಮೈದಾನಕ್ಕೆ ಬರುತ್ತಾರೆ. ಸೆಕ್ಯಲರ್ ಶಕ್ತಿಗಳ ಜಯಘೋಷ ಮತ್ತೆ ಮುಗಿಲಿಗೆ ಏರುತ್ತದೆ.

ಸೊಸೆ ಸೋನಿಯಾ, ಅಂಪೈರ್ ಗಿಲ್ ರಿಂದ ಗಾರ್ಡ್ ತೆಗೆದುಕೊಂಡು ನಂತರ ಸೈಟ್ ಸ್ಕ್ರೀನ್ ಕಡೆ ನೋಡಿ ರಭಸದಿಂದ ಕೈಬೀಸಿ ಗಿಲ್‌ಗೆ ಸಂಜ್ಞೆ ಮಾಡುತ್ತಾರೆ. ಅರೆ, ಇದೇನಿದು ಸೈಟ್ ಸ್ಕ್ರೀನ್ ಮುಂದೆ ಯಾರೋ ಟ್ರಾಕ್ಟರ್ ನಿಲ್ಲಿಸಿಬಿಟ್ಟಿದ್ದಾರೇನು? ಇಲ್ಲ, ಅದು ಟ್ರಾಕ್ಟರಲ್ಲವಂತೆ. ಓಹೋ ಅದೊಂದು ಗನ್ನು. ಇದೆಲ್ಲಾ ಆ ಶಕುನಿ ಜಾರ್ಜ್‌ನ ಕೆಲಸ. ಬೋಫೋರ್ಸ್ ಗನ್ನೊಂದನ್ನು ತಂದು ಅಲ್ಲಿ ನಿಲ್ಲಿಸಿಬಿಟ್ಟಿದ್ದಾನೆ. ಗಿಲ್ ಬೇಗ ಆ ಗನ್ನನ್ನು ಪಕ್ಕಕ್ಕೆ ಸರಿಸಿ ಬೌಲರ್ ಜಾರ್ಜ್‌ಗೆ ಬೌಲ್ ಮಾಡಲು ಹೇಳುತ್ತಾರೆ. ಆದರೇನು! ಆಗಬಾರದ ಆಘಾತ ಆಗಿಹೋಗಿದೆ. ಕುರುಕ್ಷೇತ್ರದಲ್ಲಿ ತನ್ನ ಜ್ಞಾತಿಗಳನ್ನು ನೋಡಿ ಕಂಪಿಸಿದ ಅರ್ಜುನನಂತೆ ಗನ್ನನ್ನು ನೋಡಿದ ಸೋನಿಯಾ ಕಂಪಿಸುತ್ತಿದ್ದಾರೆ. ಕೈ ಗ್ಲೋವ್ ಬೆವರಿನಿಂದ ಒದ್ದೆಯಾಗಿದೆ. ಬ್ಯಾಟ್ ಕೈಜಾರಿ ಬೀಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಪಾಪ, ಆ ಬಡಪಾಯಿ ಸೊಸೆ ಏನು ತಾನೇ ಮಾಡಬಲ್ಲಳು. ಕುತಂತ್ರಿ ಜಾರ್ಜ್ ಎಸೆದ ಚೆಂಡು ನೇರವಾಗಿ ಎಡ ವಿಕೆಟ್ಟನ್ನು ಉರುಳಿಸಿದೆ. ಸೋನಿಯಾ ಪೆವಿಲಿಯನ್ನಿಗೆ ಹಿಂತಿರುಗುತ್ತಿದ್ದಂತೆ ಸೆಕ್ಯುಲರ್ ಕ್ಯಾಂಪ್‌ನಲ್ಲಿ ಗುಸುಗುಸು ಪ್ರಾರಂಭವಾಗಿದೆ. ತಮ್ಮ ನಾಯಕಿಗಿಂತ ಹೆಚ್ಚು ರನ್ ಗಳಿಸುವ ಉದ್ಧಟತನದ ಅಪವಾದಕ್ಕೆ ಹೆದರಿ ಮಿಕ್ಕ ಬ್ಯಾಟ್ಸ್‌ಮೆನ್‌ಗಳು ಮೈದಾನಕ್ಕೆ ಹೋಗಲು ನಿರಾಕರಿಸುತ್ತಿದ್ದಂತೆ...''

ರೂಮಿನ ಬಾಗಿಲು ತೆರೆಯಿತು. ''ರಣತುಂಗ ಔಟ್. ಇಂಡ್ಯಾ ಗೆಲ್ಲೋಹಾಗಿದೆ'' ಅಂತ ಯಾರೋ ಕೂಗಿ ಓಡಿದರು. ನಾವೆಲ್ಲಾ ಅವರ ಹಿಂದೆಯೇ ಟಿ.ವಿ. ನೋಡಲು ಓಡಿದೆವು.

★★★

ಕಾಶಿ ಸಮಾರಾಧನೆ

- ಬೇಲೂರು ರಾಮಮೂರ್ತಿ

ಅವತ್ತು ಸೀತಾಪತಿ ಮನೇಲಿ ಕಾಶಿ ಸಮಾರಾಧನೆ ಬಹಳ ಜೋರಾಗೇ ಮಾಡ್ತಿದ್ದ ಅಂತ ಕಾಣುತ್ತೆ, ಯಾಕೇಂದ್ರೆ ಅವತ್ತು ಯಾರನ್ನ ಮಾತಾಡಿಸಿದ್ರೂ ಇಲ್ಲಪ್ಪ ಹನ್ನೆರಡು ಗಂಟೆಗೆ ಸೀತಾಪತಿ ಮನೆಗೆ ಹೋಗಬೇಕು ಅನ್ತಿದ್ರು. ಇಡೀ ಊರ್ನೇ ಊಟಕ್ಕೆ ಕರ್ದು ಬೋಳಿಸ್ಕೊಳ್ಳೋ ಕೆಲಸ ಸೀತಾಪತಿ ಯಾಕೆ ಮಾಡ್ದ ಅಂತ ಕೆಲವು ಹಿರೀತಲೆಗಳು ರಪರಪಾಂತ ತಲೆ ಕೆರ್ಕೊಂಡ್ರು.

ಕಪನೀಪತಿ ಮಡಿ ಒಣಗಿ ಹಾಕಿದ್ದ ಪಂಚೆ ತೆಗೆದು ನೀಟಾಗಿ ಕಚ್ಚೆ ಹಾಕಿ ಉಟ್ಕೊಂಡು ಹೆಗಲ ಮೇಲೊಂದು ಶಲ್ಯ ಹೊದ್ದು ಜನಿವಾರ ಸರಿ ಮಾಡ್ಕೊಂಡು ಪಂಚಪಾತ್ರೆ ಉದ್ದರಣೆ ಸಿದ್ದ ಮಾಡಿಟ್ಕೊಂಡ್ರು. ಅವರು ಈಚೆಗೆ ಬರೋ ಹೊತ್ಗೆ ಸೀನಪ್ಪ, ನಾರಾಯಣಯ್ಯ, ಚಂದ್ರಣ್ಣ ಎಲ್ರೂ ಕೈಲಿ ಪಂಚಪಾತ್ರೆ ಉದ್ದರಣೆ ಹಿಡಿದು ಸೀತಾಪತಿ ಮನೆ ಕಡೆ ನಡೀತಿದ್ರು.

ಸೀತಾಪತಿ ಮನೆ ಮುಂದೆ ನಿಂತು ಬ್ರಾಹ್ಮಣ ಸಮೂಹವನ್ನು ಕೈ ಮುಗಿದು ದಯಮಾಡಿಸಬೇಕು ಅಂತ ಹೇಳಿ ಒಳಕ್ಕೆ ಬಿಡ್ತಿದ್ದರು. ಒಳಗೆ ಸೀತಾಪತಿಯ ಮಕ್ಕಳು ಎಲೆ ಹಾಕಿರುವ ಜಾಗಕ್ಕೆ ಕರ್ಕೊಂಡ್ ಹೋಗಿ ತಾವು ಇಲ್ಲಿ ಕೂತ್ಕೊಳ್ಳಿ... ತಾವು ಇಲ್ಲಿ ಕೂತ್ಕೊಳ್ಳಿ ಅಂತ ಜಾಗ ತೋರಿಸ್ತಿದ್ರು.

ಸೀತಾಪತಿಯ ಕುಟುಂಬ ಸೀತಮ್ಮ ಮಹಿಳೆಯರನ್ನು ಕರೆದು ಬೇರೆ ಸಾಲಿನಲ್ಲಿ ಊಟಕ್ಕೆ ಕೂರಿಸ್ತಿದ್ರು. ಹೇಳಿದ ಸಮಯಕ್ಕೆ ಸರಿಯಾಗಿ ಊಟ ಬಡಿಸಿದರು. ಎಲ್ಲರೂ ಪರಿಷಂಚನೆ ಮಾಡಿದರು. ಕೈಯಲ್ಲಿ ನೀರು ಹಾಕಿಕೊಂಡು ಆಪೋಶನಕ್ಕಾಗಿ ಕಾದರು. ಸೀತಾಪತಿ ಎಲ್ಲರಿಗೂ ಆಪೋಶನ ಹಾಕಿಕೊಂಡು ಬಂದು ಒಂದು ಉದ್ದರಣೆ ನೀರು ಬಿಟ್ಟು ಹರನಮಃ ಪಾರ್ವತಿಪತಯೇ ಹರಹರ ಮಹಾದೇವ ಅಂದಮೇಲೆ ಎಲ್ಲರೂ ಆಪೋಶನ ತೆಗೆದುಕೊಂಡು ಕೇಶವಾಯಸ್ವಾಹ ಮಾಧವಾಯಸ್ವಾಹ ಅಂದು ಆರುಸಾರಿ ಚೂರು ಚೂರು ಅನ್ನ ತಿಂದು ನಂತರ ಪಾಯಸ ನೆಕ್ಕಿದರು.

ಎಲ್ಲರೂ ಸಾವಕಾಶವಾಗಿ ಊಟ ಮಾಡಬೇಕು ತಡವಾಗಿದೆ ಅಂದು ಸೀತಾಪತಿ ಪಂಕ್ತಿಯ ಮೇಲೆ ಹೇಳಿಕೊಂಡು ಬಂದರು. ಅಡಿಗೆಯವರು ನಿಧಾನವಾಗಿ ಬಡಿಸಿದರು.

''ಈಚೆಗೆ ಕಾಶಿ ಸಮಾರಾಧನೆಗಳು ಬಹಳ ಕಮ್ಮಿ ಅಲ್ವೆ'' ಅಂದರು ಗುರಪ್ಪ ಮಜ್ಜಿಗೆ ಹುಳಿ ಸುರಿಯುತ್ತಾ

''ಕಾಶಿಗೆ ಹೋಗೋರೇ ಕಡಿಮೆ. ಇನ್ನು ಸಮಾರಾಧನೆ ಎಲ್ಲಿ ಬಂತು ಅಂದ್ಹಾಗೆ ನೀವು ಕಾಶಿಗೆ ಹೋಗಿದೀರ.''

''ಇಲ್ಲಪ್ಪ ಹೋಗೋದು ಇಲ್ಲ ಹೋದರೆ ಸ್ನಾನನೂ ಮಾಡಲ್ಲ''

''ಯಾಕೆ... ಕಾಶಿಗೆ ಹೋಗಿಬರೋದು ಎಲ್ಲರ ಜೀವನದ ಮಹತ್ತರವಾದ ಆಸೆ ಅಲ್ವೆ''

''ಹೌದು... ಅದು ಆಗಿನ ಕಾಲದಲ್ಲಿ. ಯಾಕೇಂದ್ರೆ ಆಗಿನ ಕಾಲದಲ್ಲಿ ಈಗಿನ ಹಾಗೆ ಮೋಟಾರು, ರೈಲು, ಏರೋಪ್ಲೇನು ಇರಲಿಲ್ಲ. ಎಷ್ಟೋ ದೂರ ನಡೆದು ಹೋಗಿ ದಣಿದು ಬರ್ತಿದ್ರು. ಅಷ್ಟು ಕಷ್ಟಪಟ್ಟು ಕಾಶಿಗೆ ಹೋಗಿ ಸುಖವಾಗಿ ಹಿಂದಿರುಗಿದರೆ ಸಮಾರಾಧನೆ ಮಾಡೋರು. ಕಾಶಿಗೆ ಹೋಗಕ್ಕೆ ಆಗ್ದೇ ಇದ್ದೋರು ಕಾಶಿಗೆ ಹೋಗಿ ಬಂದೋರ್ನ ನೋಡಿ ಅವರ ಕಾಲಿಗೆ ನಮಸ್ಕಾರ ಮಾಡಿದ್ರೆ ಅವರಿಗೂ ಕಾಶಿಗೆ ಹೋಗಿ ಬಂದಷ್ಟೆ ಪುಣ್ಯ ಬರುತ್ತೆ ಅಂತ ನಂಬಿದ್ರು. ಆದ್ರೆ ಈಗ ಕಾಲವೇ ಬೇರೆ ಬಿಡಿ.''

ನಾರಾಯಣಚಾಯರ ಎಲೆ ಭರ್ತಿ ಅನ್ನ ಹಾಕಿಸಿಕೊಂಡು ಪಾತಿ ಮಾಡಿ ಸಾರು ಸುರಿಸಿಕೊಂಡು ಸರ ಸರ ಸುರಿಯುತ್ತಾ

''ನೀವು ಹೇಳೋದು ಸರಿಯೇ'' ಈಗ ಮೈಕೈ ನೋವಿಲ್ದೆ ಕಾಶಿಗೆ ಹೋಗಬಹುದು... ಹಿಂದಿರುಗಬಹುದು. ಆದರೆ ಹೋದಹಾಗೆ ಹಿಂದಿರುಗ್ತೀವಿ ಅಂತ ನಂಬ್ಕೆ ಇಲ್ಲ.

''ಅಂದ್ರೆ ಏನಾಗುತ್ತೆ'' ಗುರಪ್ಪ ಪ್ರಶ್ನಿಸಿದರು.

'ಏನಾಗುತ್ತೇ... ಏನಾಗುಲ್ಲ ಅಂತ ಕೇಳಿ ಅಂದು ಖಾಲಿಯಾದ ಪಾತಿಗೆ ಮತ್ತೆ ಚರಟದ ಸಾರು ಸುರಿಸಿಕೊಂಡು ಎರಡು ಸಾರಿ ಕೈಯಿಂದ ಬಾಚಿ ಬಾಯಿಗೆ ಸುರಿದುಕೊಂಡು

''ಇದೇನು ಹೀಗೆ ಹೇಳ್ತೀರ... ನೀವು ಕಾಶಿಗೆ ಹೋಗಿದೀರ'' ಅಂತ ಕೇಳಿದರು.

''ಇಲ್ಲ ಹೋಗ್ಲಿಲ್ಲ''

''ಒಳ್ಳೆ ಕೆಲಸ ಮಾಡಿದಿರಿ... ದಯವಿಟ್ಟು ಹೋಗಬೇಡಿ... ಅಲ್ಲಿ ಏನು ಗಲೀಜು... ಏನು ಅಸಹ್ಯ ಅಂತೀರಾ... ನಾನು ಈಗ ಐದು ವರ್ಷದ ಹಿಂದೆ ಹೋಗಿದ್ದೆ... ಬಂದದ್ದಾಗಿದೆ ಒಂದು ಮುಳುಗು ಹಾಕೋಣ ಅಂತ ಹೋದ್ರೆ... ನಾಲ್ಕೈದು ಅಮೇಧ್ಯದ ಉಂಡೆಗಳು ತೇಲಿಕೊಂಡು ಬರ್ತಿವೆ... ಥತ್ ದರಿದ್ರದ್ದು ಅಂದ್ಕೊಂಡು ಇನ್ನು ಸ್ವಲ್ಪ ಮುಂದೆ ಹೋದೆ. ಅಲ್ಲಿ ಇನ್ನೇನು ಮುಳುಗಬೇಕು ಅನ್ನುವಾಗ ಒಂದು ಹೆಂಗಸಿನ ಅರ್ಧ ಬೆಂದ ಹೆಣ ಹೇಗೆ ತೇಲ್ತಾ ಬರ್ತಿತ್ತು ಅಂತೀರಾ... ಛೆ... ಛೆ... ಇನ್ಮೇಲೆ ಕಾಶಿಗೆ ಬರ್ಲೇ ಬಾರ್ದು ಬಂದ್ರೆ ಸ್ನಾನನೂ ಮಾಡ್ಬಾರ್ದು ಅನಿಸಿಬಿಡ್ತು.''

ಅಂದು ವಿವರಿಸಿದರು ನಾರಾಯಣಚಾರ್ಯ.

ಸೀತಾಪತಿ ಪಂಕ್ತಿಯ ಮೇಲೆ ನಡೆದು ಬರ್ತ ದೇವರನಾಮ ಹೇಳುತ್ತಿದ್ದರು. ಮಧ್ಯೆ ಮಧ್ಯೆ ಸಾವಕಾಶವಾಗಿ ಭೋಜನವಾಗಬೇಕು ಅಂತ ಉಪಚರಿಸುತ್ತಿದ್ದರು.

ಊಟದ ನಂತರ ಎಲೆಯಡಿಕೆ ಮೆಲ್ಲುವಿಕೆ ನಡೆದಿತ್ತು. ಗುರಪ್ಪ, ಕಪನೀಪತಿ ಸೊಂಟ ಕೆರೆದುಕೊಂಡು ಹಾಗೇ ನಶ್ಯದ ಡಬ್ಬಾ ಈಚೆ ತೆಗೆದು ಎರಡು ಚಿಟಿಕೆ ಮೂಗಿಗೇರಿಸಿ ಅಮ್ಮಮ್ಮ ಅಂದು ಸೀತಾಪತಿಯ ಕಡೆ ತಿರುಗಿ

''ಅಂತೂ ಭರ್ಜರಿ ಸಮಾರಾಧನೆ ಮಾಡಿದಿರಿ. ಅಂದ್ಹಾಗೆ ನಿಮ್ಮ ಕಾಶಿ ಅನುಭವ ಏನೋ'' ಅಂದರು.


ಅನುಭವ ಏನು ಹೇಳ್ಲಿ... ಹೇಳದಿರೋದೇ ವಾಸಿ. ಋಷಿ ಮೂಲ, ನದಿಮೂಲ, ಹೆಣ್ಣಿನ ಮೂಲ ಹಾಗೆ ಕಾಶಿಯ ಮೂಲನೂ ಹುಡುಕೋಕೆ ಹೋಗಬಾರ್ದು ಅನಿಸಿತು. ಕೆಟ್ಟ ವಾತಾವರಣ. (ಕಸ್ತೂರಿ ಹೇಳೋ ಹಾಗೆ ನಾತಾವರಣ) ಕೆಟ್ಟ ಗಾಳಿ, ನೀರು... ಅಬ್ಬಬ್ಬ... ಯಾಕೆ ನಮ್ಮ ಜನ ಹೀಗೆ ಹಾಳು ಮಾಡಿದಾರೆ ಅಂತ ಗೊತ್ತಾಗ್ತಿಲ್ಲ. ಅವತ್ತು ಅಲ್ಲಿ ಕಾಶಿಗೆ ಹೋದ ದಿನ ಅಲ್ಲಿ ಸ್ನಾನ ಮಾಡಿದ ದಿನ ಅಲ್ಲೇ ದೇವರಿಗೆ ಹರಸಿಕೊಂಡೆ.

''ಏನಂತ'' ಗುರಪ್ಪ ಪ್ರಶ್ನಿಸಿದರು

''ಅಯ್ಯೋ ದೇವರೇ ಇಲ್ಲಿ ಸ್ನಾನ ಮಾಡಿದರೆ ಕಾಯಿಲೆ ಬರದಿರುತ್ತದೆಯೇ... ಬಂದದ್ದಾಯ್ತು, ಸ್ನಾನ ಮಾಡಿದ್ದಾಯ್ತು... ನಾವು ಸುಖವಾಗಿ ಊರು ಸೇರಿ ಒಂದು ತಿಂಗಳ ತನಕವೂ ನಮ್ಮ ಕುಟುಂಬದಲ್ಲಿ ಯಾರಿಗೂ ಯಾವ ರೀತಿಯ ಕಾಯಿಲೆಯೂ ಬರದಿದ್ದರೆ ಒಂದು ಸಮಾರಾಧನೆ ಏರ್ಪಡಿಸುತ್ತೇನೆ ಅಂತ ಅಲ್ಲೇ

ಅವತ್ತೇ ಹರಕೆ ತೊಟ್ಟೆ. ಊರಿಗೆ ಬಂದು ಕೆಲ ದಿನಗಳಾದ ಮೇಲೆ ಯಾರು ಏನು ಅಂದರೂ ಅದು ಕಾಶಿ ಕಾಯಿಲೇನೇ ಇರಬೇಕು ಅಂತ ಹೆದರಿಕೆಯಾಗೋದು, ಸಧ್ಯ ನಾವು ಕಾಶಿಯಿಂದ ಹಿಂದಿರುಗಿ ಎರಡು ತಿಂಗಳಾಯ್ತು ಯಾರಿಗೂ ಏನೂ ಆಗ್ಲಿಲ್ಲ. ಅದಕ್ಕೆ ಆನಂದದಿಂದ ಸಮಾರಾಧನೆ ಏರ್ಪಾಡು ಮಾಡಿಬಿಟ್ಟೆ'' ಅಂದು ವಿವರಿಸಿದರು ಸೀತಾಪತಿ.

ಅಂತೂ ಕಾಶಿ ಸಮಾರಾಧನೆಯ ರಹಸ್ಯ ಸ್ಫೋಟವಾಯಿತು. ಎರಡನೇ ಪಂಕ್ತಿಗೆ ಎಲೆ ಹಾಕಿದ್ರು. ಎಲ್ರೂ ಪಂಚೆ ಸರಿಮಾಡ್ಕೊಂಡು ಕೂತ್ಕೊತಿದ್ರು. ಗುರಪ್ಪ ಸುಮ್ನಿರ್ಲಾರ್ದೆ... ''ಕೆಲವು ಚರ್ಮ ರೋಗಗಳು ಬಹಳ ನಿಧಾನವಾಗಿ...'' ಅನ್ನುತ್ತಿದ್ದ ಹಾಗೆ ಕಪನೀಪತಿ ಅವನ ಬಾಯಿ ಮೇಲೆ ತಮ್ಮ ಕೈಯಿಟ್ಟು ಮುಚ್ಚಿ ಸೀತಾಪತಿ ಕಡೆ ನೋಡಿ ನಾವು ಬರ್ತೀವಿ ಅಂದರು. ತುಸು ದೂರ ಬಂದಮೇಲೆ ಅವರು ಗುರಪ್ಪನ ಬಾಯಿಂದ ಕೈ ತೆಗೆದದ್ದು. ಇವರು ಡರ್ ಅಂದು ತೇಗಿಕೊಂಡು ಮನೆಯತ್ತ ಹೊರಟಾಗ ಎರಡನೇ ಪಂಕ್ತಿಗೆ ಸೀತಾಪತಿ ಆಪೋಶನ ಹಾಕಿ ಹರನಮಃ ಪಾರ್ವತಿ ಪತೆಯೇ ಅಂದದ್ದು ರಸ್ತೆಗೂ ಕೇಳಿಸುತ್ತಿತ್ತು.



ಸೂಪರ್ ಸಿಕ್ಸ್‌ನಲ್ಲಿ ಜಾಗ ಸಿಕ್ಲೀ ಅಂತ ಅರ್ಚನೆ ಮಾಡಿಸ್ದೇರೀ

ಸ್ವಯಂ ನಿವೃತ್ತಿ ತೆಗೆದುಕೊಳ್ಳಲು ಕಾರಣಗಳು ಬೇಕೆ?

- ಇಸ್ಮೆಯಲ್

ಸ್ವಯಂ ನಿವೃತ್ತಿ ತೆಗೆದುಕೊಳ್ಳುವುದಕ್ಕೆ ಏನಾದರೂ ಕಾರಣ ಇರಲೇಬೇಕು. ಕೆಲವರು ಇದಕ್ಕಾಗಿ ಬಹಳ ತಲೆಕೆಡಿಕೊಳ್ಳುತ್ತಿದ್ದಾರೆ. ನನಗೆ ಬೇರೆಯವರು ತಲೆಕೆಡಿಸಿಕೊಂಡರೆ ಸಹಿಸುವುದಿಲ್ಲ ಅದೂ ಅಲ್ಲದೆ ತಮಗೆ ತಾವೇ ತಲೆಕೆಡಿಸಿಕೊಳ್ಳುವುದು ಅಂದರೆ ಏನರ್ಥ? ತಲೆಕೆಡಿಸಲು ಬೇರೆಯವರ ಸಹಾಯವಿರಲೇಬೇಕು ಅದೆಲ್ಲ ಏಕೆ ಈಗ? ವಿಷಯಕ್ಕೆ ಬರೋಣ. ನಿಮಗೆ ಕೆಳಕಂಡ ಕಾರಣಗಳು ಹಿಡಿಸಿದರೆ ಈ ಪಟ್ಟಿ ಮಾಡಿದ ಶ್ರಮ ಸಾರ್ಥಕ. ಸ್ವಯಂ ನಿವೃತ್ತಿ ತೆಗೆದುಕೊಳ್ಳಲು ಒಂದೇ ಕಾರಣ ಸಾಕಾದರೂ ಎರಡೂ ಮೂರು ಒಟ್ಟು ಕಾರಣಗಳನ್ನು ಕೊಡಬಹುದು.

ನೀವು ಮಹಿಳೆಯಾಗಿದ್ದರೆ:

1. ಎಷ್ಟುದಿನ ಅಂತ ಎರಡೆರಡು ಕಡೆ ದುಡಿಯುವುದು ಒಂದು ಕಡೆ ಅಂತೂ ಸ್ವಯಂ ನಿವೃತ್ತಿ ಅನ್ನೋದು ಇಲ್ಲವೇ ಇಲ್ಲ ಅದಕ್ಕೆ ಉದ್ಯೋಗದಿಂದ ಸ್ವಯಂ ನಿವೃತ್ತಿ ಒಂದೇದಾರಿ.
2. ನನ್ನ ಸಂಬಳದಲ್ಲಿ ತಮ್ಮ ಖರ್ಚನ್ನು ನಿಭಾಯಿಸುತ್ತಾ ಏನೋ ತಾನೇ ಮನೆ ನಡೆಸೊ ಜವಾಬ್ದಾರಿ ಹೊತ್ತುಕೊಂಡ ಹಾಗೆ ನಟಿಸುವ ಗಂಡನ ನಿಜವಾದ ಮೌಲ್ಯ ತಿಳಿಯಬೇಕಾದರೆ ಸ್ವಯಂ ನಿವೃತ್ತಿ ತೆಗೆದುಕೊಳ್ಳಬೇಕು ಆದರೆ ಈ ಕಾರಣ ಅಫಿಷಿಯಲ್ ಆಗಿ ಕೊಡಲಾಗುವುದಿಲ್ಲ ಅದಕ್ಕೆ ಕಷ್ಟವಾದರೂ ಅನಾರೋಗ್ಯ ಅಂತ ಹೇಳಿ ಅರ್ಜಿ ಹಾಕೋದು.
3. ಅತ್ತೆ ಕಾಟ ತಪ್ಪಿಸಿಕೊಳ್ಳಲು ನಾನು ಕೆಲ್ಸಕ್ಕೆ ಸೇರಿದ್ದು ಮೊನ್ನೆ ಪಾಪ ನಮ್ಮತ್ತೆ ತೀರಿಕೊಂಡರು. ನಾನು ಇನ್ಯಾರಿಗೆ ದುಡಿಯಲಿ ಹೇಳಿ?


ನೀವು ಮಹನೀಯರಾಗಿದ್ದರೆ

1. ಸೋಮಾರಿತನ ಅಂತ ಬರೆಯುವುದಕ್ಕೆ ಆಗುತ್ತದೆಯೆ ಅದಕ್ಕೆ ಬಾಸ್ ಮೇಲೆ ಗೂಬೆ ಕೂರಿಸುವುದು. ಕೂತರೆ ನಿಂತರೆ ಬೈತಾನೆ ನನಗೂ ಸಾಕಾಗಿ ಹೋಗಿದೆ. 25 ವರ್ಷ ಸರ್ವಿಸ್ ಆದರೂ ನಿನ್ನೆ ಮೊನ್ನೆ ತಾನೆ ಸೇರಿದ ಹಾಗೆ

ನಡೆದುಕೊಳ್ಳುತ್ತಾನೆ. ಸೆಲ್ಫ್ ರೆಸ್ಪೆಕ್ಟ್ ಇಲ್ಲದ ಮೇಲೆ ಏಕೆ ಕೆಲ್ಸ ಮಾಡಬೇಕು. ಬಾಸ್ ಈಗ ಬಂದಿರುವನು ಇನ್ನೂ ನಾಲ್ಕು ವರ್ಷ ಖಾಯಂ. ಅಂದರೆ ನನಗೆ ರಿಟೈರ್ ಆಗೋ ತನಕ ಬೈಸಿಕೊಳ್ಳೋದು ಗ್ಯಾರಂಟಿ. ಯಾತಕ್ಕೆ ಈಗಲೇ ತೆಗೆದುಕೊಳ್ಳಬಾರ್ದು.

2. ನನ್ನ ಸ್ನೇಹಿತ ಸ್ವಯಂ ನಿವೃತ್ತಿ ತೆಗೆದುಕೊಂಡಮೇಲೆ ಮೊದಲಿಗಿಂತ ಆರ್ಥಿಕವಾಗಿ ಸುಧಾರಿಸಿದ್ದಾನೆ. ಪೆನ್‌ಷನ್ ಬರುತ್ತೆ ಆಮೇಲೆ ವಯಸ್ಸಾದವರಿಗೆ ಈಗ ಬೇಗ ಕೆಲ್ಸ ಸಿಗುತ್ತಂತೆ. ಒಂದು ಕಡೆ ಸಂಬಳ ಇನ್ನೊಂದು ಕಡೆ ಪೆನ್‌ಷನ್. ಇನ್‌ಕಂ ಟ್ಯಾಕ್ಸ್ ಇಲ್ಲ. ನಾನೂ ಯಾಕೆ ಸ್ವಯಂ ನಿವೃತ್ತಿ ತೆಗೆದುಕೊಳ್ಳಬಾರ್ದು.

3. ನನ್ನ ಹೆಂಡ್ತಿ ಸ್ವಯಂ ನಿವೃತ್ತಿ ತೆಗೆದುಕೊಳ್ಳುತ್ತಿದ್ದಾಳೆ. ಅವಳು ನನಗಿಂತ 9 ವರ್ಷ ಚಿಕ್ಕವಳು. ಇನ್ನು ನಾನು ಕೆಲ್ಸ ಮಾಡುವುದು ಸರಿಯಲ್ಲ. ವಯಸ್ಸಾದವರಿಗೆ ಮರ್ಯಾದೆ ನಾವೇ ಕೊಡದಿದ್ದರೆ ಇನ್ಯಾರು ಕೊಡುತ್ತಾರೆ. ತಾನೂ ಡಬ್ಬಿ ತೆಗೆದುಕೊಂಡು ಹೋಗುತ್ತಿದ್ದರಿಂದ ಸ್ವಲ್ಪವಾದರೂ ವೆರೈಟಿ ಇರುತ್ತಿತ್ತು. ಇನ್ನು ನನ್ನ ಊಟದ ಡಬ್ಬಿ ಗತಿ? ಸ್ವಯಂ ನಿವೃತ್ತಿಯಾಗಲೇಬೇಕು.



ನರಿಕಥೆ

- ವೈ.ವಿ. ಗುಂಡೂರಾವ್

ನರಿಗಳಲ್ಲಿ ಹಲವು ಜಾತಿ ಸ್ವಾಮಿ
ನರಿಗಳಲ್ಲೂ ಹಲವು ಜಾತಿ

ಕೆಲವು ಆರ್ಡಿ'ನರಿ'ಯಾದರೆ
ಮತ್ತೆ ಕೆಲವು ಎಕ್ಸ್ಟ್ರಾಆರ್ಡಿ'ನರಿ'

ನರಿ, ಮರಿ ಇರುವಾಗ ಆರ್ಡಿ'ನರಿ'ಯೋ
ಎಕ್ಸ್ಟ್ರಾಆರ್ಡಿ'ನರಿ'ಯೋ ತಿಳಿಯುವುದಿಲ್ಲ
ಏಕೆಂದರೆ ಅದಿನ್ನೂ ಪ್ರಿಲಿಮಿ'ನರಿ'ಯಲ್ಲಾ!


ಕೆಲ ನರಿಗಳೋ ಹುಟ್ಟಾ ಎಕ್ಸ್ಟ್ರಾಆರ್ಡಿ'ನರಿ' ಜಾತಿ
ಮತ್ತೆ ಕೆಲವಕ್ಕೆ ಬೇಕು ಕೆಲ ದಿನದ ತರಬೇತಿ
ತರಬೇತಿ ಪಡೆಯುವಾ ನರಿ
ಯಾವುದು ಗೊತ್ತೇ ಸ್ವಾಮಿ? ಅದು ಪ್ರೊಬೇಷ'ನರಿ'

ತರಬೇತಿ ಪಡೆದರೂ ಪ್ರಯೋಜನವಿಲ್ಲ
ಅಲ್ಲಾಡದೇ ಬಿದ್ದಲ್ಲೇ ಬಿದ್ದಿದೆಯಲ್ಲಾ
ತರಬೇತಿ ಪಡೆದರೂ ಪ್ರಯೋಜನವಿಲ್ಲ
ಬಿದ್ದಲ್ಲೇ ಅಲ್ಲಾಡದೇ ಬಿದ್ದಿದೆಯಲ್ಲಾ
ಇದು ಎಂತಹ ಜಾತಿ ನರಿ?
ಗೊತ್ತಿಲ್ಲವೇ ಸ್ವಾಮಿ ಅದು ಸ್ಟೇಷ'ನರಿ'

ಕೆಲವು ನರಿಗಳೋ ಕೆಂಡ ಕಾರಿ
ಆಗುತ್ತವೆ ಭಾರಿ ಕ್ರಾಂತಿಕಾರಿ
ಗೊತ್ತೇ ಇದು ಯಾವ ಜಾತಿ ನರಿ?
ಎಚ್ಚರ ಸ್ವಾಮಿ! ಅದು ರೆವೆಲ್ಯೂಷ'ನರಿ'

ಆಗುವುದಿಲ್ಲ ಕೆಲವು ಯಾವುದಕೂ ಷಿಕಾರಿ
ನರಿಗಳೆಂದರೇ ಭಾರಿ ಹುಷಾರಿ
ಅಂತಹ ಹುಷಾರಿ ನರಿ
ಹುಷಾರು ಸ್ವಾಮಿ, ಅದು ಪ್ರಿಕಾಷ'ನರಿ'

ಇನ್ನೂ ಹಲ ಬಗೆಯ ನರಿ ನೋಡಬೇಕೇ
ವೃಥಾ ಕಾಡಿನಲ್ಲಿ ಅಲೆಯುತ್ತೀರಿ ಏಕೆ?
ಇನ್ನೂ ಹಲ ಬಗೆಯ ನರಿ ನೋಡಬೇಕೇ?
ಕಾಡಿನಲ್ಲಿ ವೃಥಾ ಅಲೆಯುತ್ತೀರಿ ಏಕೆ?
ಎಲ್ಲಾ ಜಾತಿ ನರಿ ಸಿಗುವ ಜಾಗ ಒಂದೇ
ಸ್ವಾಮಿ ಅದು ಡಿಕ್'ಷ'ನರಿ'



ಜಿಂಬಾಬ್ವೇ ಇಂಗಾಡ್ತಾರೇ ಅಂತ ಗೊತ್ತಿರ್ಲಿಲ್ವೇ

ಭಾಷೆಯ ಏರಿಳಿತಗಳು

– ಟಿ. ಆರ್. ರಾಧಾಕೃಷ್ಣ

ಒಂದು ಕಾಲದಲ್ಲಿ ನನಗೆ ಗೊತ್ತಿಲ್ಲದೆ ಮೊಳೆತ ಕನ್ನಡಾಭಿಮಾನವೋ, ಕನ್ನಡ ಪ್ರೇಮವೋ ಕಾರಣವಾಗಿ, ಪದವಿಯಲ್ಲಿ ಐಚ್ಛಿಕ ಕನ್ನಡ ತೆಗೆದುಕೊಂಡು, ಮುವ್ವತ್ತು ವರ್ಷಕ್ಕಿಂತ ಹೆಚ್ಚು ವರ್ಷ ಕನ್ನಡ ಅಧ್ಯಾಪಕನಾಗಿ ಕೆಲಸ ಮಾಡಿರುವುದರಿಂದ ಸಹಜವಾಗಿ ಭಾಷೆಯ ಬಗ್ಗೆ, ಅಥವಾ ಭಾಷಾಶಾಸ್ತ್ರದ ಬಗ್ಗೆ ಒಂದು ಸಾಸುವೆ ಕಾಳಷ್ಟಾದರೂ ಆಸಕ್ತಿ ಉಳಿದಿರುತ್ತದೆ ಎಂಬುದು ನಿಜ. ಆದರೆ ದಯವಿಟ್ಟು ಶುರುವಾಯಿತು ಕೊರೆತ ಎಂದು ಹತ್ತಿ ಎಲ್ಲಿದೆ ಎಂಬ ಕಡೆ ಕಣ್ಣು ಹಾಯಿಸಬೇಡಿ! ಭಾಷೆಯ ಉಗಮ ಹೇಗೆ, ಯಾವ ಯಾವ ಸಿದ್ಧಾಂತಗಳು ಸೃಷ್ಟಿಯಾಗಿವೆ, ಎಂಬುದನ್ನು ಹಾಡಿದ್ದೇ ಹಾಡೋ ಕಿಸುಬಾಯಿದಾಸ ಎಂಬಂತೆ ಇನ್ನೊಮ್ಮೆ ಬರವಣಿಗೆಯಲ್ಲಿಳಿಸುವುದೂ ನನ್ನ ಗಂಭೀರ ಪ್ರಯತ್ನವಲ್ಲ! ಮೂಲ ದ್ರಾವಿಡ ಭಾಷೆಯಿಂದ ಸಿಡಿದ ಕನ್ನಡ ಪೂರ್ವದ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ಆಧುನಿಕ ಕನ್ನಡವಾಗಿ ನವೋದಯ, ಪ್ರಗತಿಶೀಲ, ನವ್ಯ, ದಲಿತ-ಬಂಡಾಯ ಸಾಹಿತ್ಯವನ್ನು ಸೃಷ್ಟಿ ಮಾಡಿದ ನಮ್ಮ ಕನ್ನಡ ಭಾಷೆಯ ಸ್ವರೂಪ ಯಾವ ಯಾವ ಮಜಲು ದಾಟಿ ಬಂದಿದೆ ಎಂಬ ಪಿ.ಹೆಚ್.ಡಿ ಮಾದರಿಯ ಮಹಾ ಪ್ರಬಂಧ ಬರೆಯಲು ಸುತಾರಾಂ ಇಷ್ಟವಿಲ್ಲ! ಅದಕ್ಕೆ ಬೇಕಾದ ಸಮಯ, ಸಂಯಮ ಯಾವ ಯಾವುದೂ ತನ್ನ ಬಳಿ ಇಲ್ಲ! ಅಷ್ಟನ್ನು ನಾನು ಓದಿಯೂ ಇಲ್ಲ! ಹಾಗಾದರೆ ನನ್ನ ಸಮಸ್ಯೆ ಏನು ಎಂಬುದಲ್ಲವೇ ಪ್ರಶ್ನೆ. ಹಾಗೆ ನೋಡಿದರೆ ನನ್ನ ಸಮಸ್ಯೆ ಭಾಷೆಯ ಸ್ವರೂಪದ ಬಗ್ಗೆ ಇಲ್ಲವೇ ಇಲ್ಲ. ಏಕೆಂದರೆ ನನಗೆ ಮತ್ತು ನಿಮಗೆ ಗೊತ್ತಿರುವ ಹಾಗೆ ಭಾಷೆ ಸದಾ ಬದಲಾವಣೆಯಾಗುತ್ತಿರುತ್ತದೆ. ಇದು ಅದರ ನೈಜ ಲಕ್ಷಣ. ಹೀಗೆ ಬದಲಾವಣೆಗೆ ತೆರೆದುಕೊಂಡ ಭಾಷೆ ನಾನಾ ಕಾರಣಗಳಿಂದ ಅನ್ಯಭಾಷೆಯಿಂದ, ವಿಜ್ಞಾನದ ಬೆಳವಣಿಗೆಯಿಂದ, ಶಿಕ್ಷಣ ಪತ್ರಿಕೋದ್ಯಮಗಳಿಂದ ಸಮೃದ್ಧವಾಗಿ ಬೆಳೆಯುತ್ತದೆ; ಬದಲಾಯಿಸುತ್ತದೆ ಅದು ಜೀವಂತ ಭಾಷೆಯ ಲಕ್ಷಣ. ಈ ಬದಲಾವಣೆಯ ಬಗ್ಗೆಯೂ ನನ್ನ ತಕರಾರು ಇಲ್ಲ. ನನ್ನ ಸಮಸ್ಯೆ ಎನ್ನುವುದಕ್ಕಿಂತ ಸಂದೇಹವೇನೆಂದರೆ ಈ ಭಾಷೆಯ ಬದಲಾವಣೆ ಇದೆಯಲ್ಲ ಅದು ಮನುಷ್ಯನ ವೈಯಕ್ತಿಕ ನೆಲೆಯಲ್ಲಿ ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ ಲಾಳಿ ಹೊಡೆಯುತ್ತ ವಿಚಿತ್ರ ವಿಚಿತ್ರ ಏರಿಳಿತಗಳನ್ನು ಹೊಂದುತ್ತದೆ ಎಂಬುದು. ಈ ಸಂದೇಹವನ್ನೇ, ಈ ವಿಸ್ಮಯವನ್ನೇ ನಾನೀಗ ಇಲ್ಲಿ ದಾಖಲಿಸಬೇಕೆಂದು ಬಯಸಿರುವುದು.

ಮನುಷ್ಯನ ಬದುಕಿನಲ್ಲಿ ಶೈಶವ, ಬಾಲ್ಯ, ಯೌವನ, ಪ್ರೌಢಾವಸ್ಥೆ, ಮುಪ್ಪು ಎಂದು ಹಲವು ಅವಸ್ಥೆಗಳಿವೆ. ಮಗುವಾಗಿದ್ದಾಗ ಮಗುವಿನ ಭಾಷೆ ಎಂದರೆ ಅಳು. ಅದನ್ನು ಬಿಟ್ಟರೆ ಸರ್ವರನ್ನೂ ಆಕರ್ಷಿಸುವ ಹೊಳಪಿನ ಮುಗ್ಧನಗು ಅಥವಾ ತನ್ನದೇ ಹೊಮ್ಮಿಸುವ ರಾಗ. ಇನ್ನು ಮಾತು ಕಲಿಯುವ ಸಂದರ್ಭ ಬಂದಾಗ ತನ್ನದೇ ಶಬ್ದಕೋಶ ನಿರ್ಮಿಸಿಕೊಳ್ಳುತ್ತದೆ. ಚಕ್ಕಿ ಅಂದರೆ ಸಕ್ಕರೆ, ಬಡ್ಡು ಎಂದರೆ ಬ್ರೆಡ್ಡು, ಪೆಪ್ಪ ಅಥವಾ ಬೆಪ್ಪ ಎಂದು ಹೇಳುತ್ತಿದ್ದರೆ ಅಪ್ಪ ಅಂತಲೋ ಇತ್ಯಾದಿ ಇತ್ಯಾದಿ ಶಬ್ದಗಳನ್ನು ಸೃಷ್ಟಿಸಿಕೊಳ್ಳುವುದು ನಮಗೆ ತಿಳಿದೇ ಇದೆ. ಇದೆಲ್ಲಾ ಬಾಲ್ಯದ ಮೊದ ಮೊದಲು ಕಂಡು ಬಹಳ ಜಾಗ್ರತೆ ಕಣ್ಮರೆಯಾಗಿಬಿಡುತ್ತವೆ. ಬಳಿಕ ವ್ಯವಹರಿಸಲು ತಕ್ಕ ಸಂದರ್ಭಕ್ಕನುಗುಣವಾಗಿ ಒಳ್ಳೆಯ ಮಾತು/ಪೋಲಿ ಮಾತು ಎರಡೂ ಕಲಿತು ಕೊಳ್ಳುತ್ತದೆ. ಈ ನಿಧಿಯನ್ನೇ ಮನುಷ್ಯ ಕೊನೆಯ ತನಕ ಬಳಸಿಕೊಳ್ಳುವುದು. ಪಂಚತಂತ್ರದಲ್ಲಿ ಬರುವ ಎರಡು ಗಿಳಿಗಳ ಕಥೆಯ ಬರೀ ಒಳ್ಳೇ ಮಾತಾಡುವವರು ಅಥವಾ ಕೆಟ್ಟ ಮಾತಾಡುವವರು ಸಿಕ್ಕುವುದು ಕಷ್ಟ. ಕೆಟ್ಟ ಮಾತಾಡುವವರು ಕೆಲವರು ಇಲ್ಲವೇ ಇಲ್ಲ ಎನ್ನಬಹುದು. ಆದರೆ ಕೆಟ್ಟ ಮಾತಾಡದೆ ಕೆಟ್ಟ ಯೋಚನೆ, ಕೆಟ್ಟ ಕೆಲಸ ಮಾಡುವ ಗೋಮುಖ ವ್ಯಾಘ್ರಗಳನ್ನು ಯಾರು ಮೆಚ್ಚುತ್ತಾರೆ! ಸಂದರ್ಭಕ್ಕನುಗುಣವಾಗಿ ಹಿತವಾಗಿ ಒಳ್ಳೆಯ ಮಾತಾಡಲಿ, ಸಂದರ್ಭಕ್ಕನುಗುಣವಾಗಿ ಮಿತವಾಗಿ ಕೆಟ್ಟ ಮಾತಾಡಲಿ ಎಂಬುದೇ ನನ್ನ ಹಾರೈಕೆ! ಇಲ್ಲದಿದ್ದರೆ ಈ ಜಗತ್ತನ್ನು ಎದುರಿಸುವುದು ಸಾಧ್ಯವೆ ನೀವೇ ಯೋಚನೆ ಮಾಡಿ!

ಇನ್ನು ಭಾಷೆಯ ಈ ಬದಲಾವಣೆಯನ್ನು ಗಮನಿಸಲು ಯೌವನ, ಪ್ರೌಢಾವಸ್ಥೆಗಳನ್ನು ಆಮೇಲೆ ಗಮನಿಸೋಣ - ಒಂದೇ ಏಟಿಗೆ ಮುಪ್ಪಿಗೆ ಬರೋಣ! 'ಮುಪ್ಪಿಗೆ' ಕಾಲಿಡುವ ಸಂದರ್ಭದಲ್ಲಿ ನಿನ್ನ ಜೊತೆಗೆ ನಾನು ಇರುತ್ತೇನೆ,ನಿನ್ನ ಸಹಾಯಕ್ಕೆ ಕರೆದಾಗಲೆಲ್ಲಾ ಬರುತ್ತೇನೆ ಎಂದು ದೌಲತ್ತಿನಿಂದ ಮೆರೆದ ಭಾಷೆ, ಮೆತ್ತಗಾಗುತ್ತಿರುವ ಮನುಷ್ಯನನ್ನು ಕಂಡು ಅದು ಕೂಡಾ ಮೆತ್ತಗೆ ದೂರ ಸರಿಯುತ್ತದೆ! ಮುಪ್ಪಿನಲ್ಲಿ ಯಾರಾದರೂ ವೀರಾವೇಶದಿಂದ ಮಾತನಾಡುವುದನ್ನು ಕೇಳಿದ್ದೀರಾ? ಧೀರ ಪ್ರತಿಜ್ಞೆಗಳನ್ನು ಮಾಡುವುದನ್ನು ಗಮನಿಸಿದ್ದೀರಾ? ಸವಾಲು ಎಸೆದು ಸಾಧಿಸಿದ್ದನ್ನು ನೋಡಿದ್ದೀರಾ? ಇದ್ದರೆ ಅಂಥವರು ಅಪರೂಪ ರೂಪ! ಮಿಕ್ಕವರ ಸ್ಥಿತಿ ಏನಿದ್ದರೂ ಅಯ್ಯೋ ಪಾಪ! ಈ ಸ್ಥಿತಿಯಲ್ಲಿ ಮೊದಲು ಕಲಿತ ಒಳ್ಳೆಯ/ಕೆಟ್ಟ ಮಾತುಗಳ ಯಾವ ಸರಕು ನಿನಗೆ ಪ್ರಯೋಜನವಿಲ್ಲವೆಂದು ಭಾಷೆ ಮುಪ್ಪಿನವರಿಗೆ ಕೆಲವು ಕೆಲವೇ ಶಬ್ದಗಳನ್ನು ಬಳುವಳಿಯಾಗಿ ಕೊಡುತ್ತದೆ. ಅವೇ ಮಂತ್ರಗಳು 'ನಾರಾಯಣಾ! ಕೃಷ್ಣಾ! ರಾಮಾ! ಪರಮೇಶ್ವರಾ! ಆತ್ಮ! ಪರಮಾತ್ಮಾ! ಓಂ ಸಚ್ಚಿದಾನಂದಾ!' ಇವೇ ಸಾಕು ಎಂದು ಭಾಷೆಯ ತೀರ್ಮಾನ!

ಯೌವನ ಮಾತ್ರ ಭಾಷೆಯನ್ನು ಅದರ ಎಲ್ಲಾ ಮುಖಗಳಲ್ಲಿ ದುಡಿಸಿಕೊಳ್ಳಲು ಬಳಸಿಕೊಳ್ಳಲು ಫಲವತ್ತಾದ ನೆಲ. ಕಣ್ಣು ತೆರೆದ ಕಡೆಗೆಲ್ಲಾ ಕುತೂಹಲ ಕೆರಳಿಸುವ ಜ್ಞಾನದ ಯಾವ ಶಾಖೆಗೂ ಲಗ್ಗೆ ಹಾಕಲು ಭಾಷೆ ಈಗ ಸಹಾಯಕ್ಕೆ ಬಂದುಬಿಡುತ್ತದೆ. ಸಾಹಸ, ಶೌರ್ಯ, ಪ್ರಮಾಣ, ಪ್ರತಿಜ್ಞೆ, ಸವಾಲು, ಪ್ರತಿಭಟನೆ ಯಾವುದನ್ನು ಮಾಡಲೂ ಭಾಷೆ ಯೌವನದ ಅಂತರಾಳದಲ್ಲಿ ಕುಳಿತು ಬ್ರೇಕ್‌ಡ್ಯಾನ್ಸ್, ಟ್ವಿಸ್ಟ್‌ಡ್ಯಾನ್ಸ್, ತಾಂಡವ ಎಲ್ಲವನ್ನೂ ಮಾಡುತ್ತಿರುತ್ತದೆ! ಅದು ಕುಣಿಸಿದಂತೆ ಯೌವನವೊ! ಯೌವನ ಕುಣಿಸಿದಂತೆ ಭಾಷೆಯೋ! ಹೇಳುವವರು ಯಾರು? ಪಂಜೆಯವರು ಬರೆದ ತೆಂಕಣ ಗಾಳಿಯಾಟದಂತೆ ಯಾರ ಯಾರನ್ನು ಬೀಳಿಸುತ್ತದೆಯೋ, ಏನೇನನ್ನು ಹಾರಿಸುತ್ತದೆಯೋ ಬಲ್ಲವರಾರು! ಹೀಗಿರುವ ಯೌವನದಲ್ಲಿ ಪ್ರೀತಿಯ ಅಂಕುರವಾಯಿತೊ-ಮುಗಿಯಿತು! ಭಾಷೆ ಯೌವನದ ಕಣ್ಣಿಗೆ ಕಂಡ ಪ್ರೀತಿಗಾಗಿ ಹೇಗೆ ಬೇಕಾದರೂ ಬಾಗುತ್ತದೆ, ಹಿಗ್ಗುತ್ತದೆ, ಬೇಕಾದ ಸಹಾಯಕ್ಕೆ ಜನ್ಮಾಂತರದ ಬಂಧುವಿನಂತೆ, ಸೇವಕನಂತೆ ಒದಗಿಬಂದು 'ಅಂದಿಗಿಂದಿಗೆಂದಿಗೆ ಹಳೆಯ ನೀನು ಗೆಳೆಯ ನಾನು' ಎಂದು ಆತ್ಮೀಯತೆ ಸ್ಥಾಪಿಸುತ್ತದೆ. ತಾರುಣ್ಯದ ಪ್ರೀತಿಯನ್ನು ಅರ್ಥಾತ್ ಹುಡುಗಿಯನ್ನು ಬಣ್ಣಿಸಲು ಉಪಮೆ, ರೂಪಕ ಯಾವ ಅಲಂಕಾರ ಬೇಕು? ಗುಲಾಬಿ! ಓಕೆ. 'ನೀನು ನನ್ನ ಕೆಂಗುಲಾಬಿಯಂತೆ!' ಉಪಮೆ ಸಿದ್ಧವಾಯಿತು! 'ಆಹಾ! ನೀನು ನನ್ನ ಕೆಂಗುಲಾಬಿ!' ರೂಪಕ ಸಿದ್ಧವಾಯಿತು! ಇಂಥ ಎಷ್ಟು ರೂಪಕಗಳನ್ನು, ಉಪಮೆಗಳನ್ನು ಹೇಳಿ ಬಿಸಾಡಬೇಕು, ಬರೆದು ಬಿಸಾಡಬೇಕು ಹೇಳಿ! ಕ್ಷಣಕ್ಕೊಂದು ಬೇಕಾದರೆ ಸಿದ್ಧ! ಈ ಪ್ರೀತಿಯ ಇಂಥ ಪೂರ್ವ ಸಿದ್ಧತೆಯೆಲ್ಲಾ ತೆರೆಮರೆಯಲ್ಲಿ ನಡೆದು, ಹೆಣ್ಣಿಗೊಂದು ಗಂಡು, ಗಂಡಿಗೊಂದು ಹೆಣ್ಣು ಎಂಬುದು ನಿಗದಿಯಾಗಿದೆಯೋ, ನಿಯಮವಾಗಿದೆಯೋ, ಅನಿವಾರ್ಯವಾಗಿದೆಯೋ ಎಂಬಂತೆ ಇವು ಪರ್ಯಾವಸನವಾದಾಗ ವಿವಾಹ ರೂಪದಲ್ಲಿ, ದಾಂಪತ್ಯ ಜೀವನದಲ್ಲಿ ಗಂಡ - ಹೆಂಡತಿ ಎಂದು ಗುರುತಿಸಿಕೊಂಡ ತಕ್ಷಣ ಈಗ ಭಾಷೆ ತಕ್ಷಣ ಬದಲಾದಂತೆ ಕಾಣದಿದ್ದರೂ, ಸೂಕ್ಷ್ಮವಾಗಿ ಗಮನಿಸಿದರೆ ಉಪಮಾಲಂಕಾರಗಳೆಲ್ಲಾ ರೂಪಕಗಳಾಗಿರುತ್ತವೆ ಅದೂ ಏನು ಉದಾತ್ತ ರೂಪಕಗಳು! ಗಂಡ ಈಗ ಹೆಂಡತಿಯನ್ನು 'ನೀನು ನನ್ನ ಗುಲಾಬಿ' ಎನ್ನುವುದಿಲ್ಲ ಬದಲಾಗಿ 'ನೀನು ನನ್ನ ದೇವತೆ!' ಎನ್ನುತ್ತಾನೆ! ಹೆಂಡತಿಗೇನು ರೂಪಕಗಳ ಕೊರತೆಯೆ? ಅವಳು ಗಂಡನನ್ನು ಕುರಿತು "ನೀವು ನನ್ನ ದೇವರು!" ಎನ್ನುತ್ತಾಳೆ! ಇಂಥ ರೂಪಕಗಳು ಒಂದೆರಡು ವರ್ಷ ಎನ್ನುವುದರೊಳಗೆ ಹಳಸಲಾಗಿ, ಭಾಷೆ ಚೈತನ್ಯದಾಯಕವೂ, ಚಲನಶೀಲವೂ ಆಗಬೇಕೆಂದು ಬಯಸುತ್ತದೆ! ಯಾವ ಬಾಯಲ್ಲಿ ದೇವತೆ ಎಂದಿದ್ದನೋ ಅದೇ ಗಂಡ "ಯಾವ ಕರ್ಮ ಮಾಡಿ ನಿನ್ನ ಕಟ್ಟಿಕೊಂಡೆ. ಎಲ್ಲಿದ್ದೆ ನೀನು ನನ್ನ ಜೀವನ ಹಾಳು ಮಾಡೋಕೆ?" ಎಂದು ಕಾಲು ಕೆರೆದು ಜಗಳಕ್ಕೆ ಭಾಷೆ

ನಾಂದಿ ಹಾಡತೊಡಗಿದೊಡನೆಯೇ, ಹೆಂಡತಿ ಸೊಂಟದ ಮೇಲೆ ಕೈಯಿಟ್ಟು ''ನಿಮ್ಮ ಕೈ ಹಿಡಿದ ನನ್ನ ಕರ್ಮ ನೋಡಿ ಎಂಥದ್ದು!'' ಎಂದು ವ್ಯಂಗ್ಯವಾಡುತ್ತಾಳೆ. ಈ ಸಂದರ್ಭದಲ್ಲಿಯೇ ಭಾಷೆ ಮನೆಯಲ್ಲಿರುವ ಮಕ್ಕಳಿಗೆ ಅದ್ದೂರಿ ರಿಯಾಯಿತಿಯಲ್ಲಿ ಪುಕ್ಕಟೆ ಮನರಂಜನೆಯನ್ನು ಈ ಗಂಡ - ಹೆಂಡತಿ ಜಗಳದ ಮೂಲಕ ಒದಗಿಸುತ್ತದೆ! ಯಾವ ಸಿನಿಮಾದಲ್ಲಿ ಕೂಡ ನೋಡದ ವೀರಾವೇಶದ, ಪಣ ತೊಡುವ ಮಾತುಗಳನ್ನು ಗಂಡ ಹೆಂಡತಿ ಆಡುತ್ತಿದ್ದರೆ ತಕ್ಕ ಅಭಿನಯ ಸಮೇತವಾಗಿ, ಮಕ್ಕಳು ರಸಾಭಾಸವಾಗದಂತೆ ಬಿಟ್ಟುಕಣ್ಣು ಬಿಟ್ಟುಕೊಂಡು ಗಂಟಲೊಣಗಿಸಿಕೊಂಡು ನೋಡುತ್ತಿರುತ್ತವೆ! ನಟಸಾರ್ವಭೌಮರು ನಮ್ಮ ಅಪ್ಪ-ಅಮ್ಮಗಳೇ ಇರಬಹುದೇ ಎಂಬ ಅನುಮಾನ ಅವಕ್ಕೆ!

ಹೀಗೆ ಕುಣಿದಾಡಿದ ಭಾಷೆ ನಲವತ್ತರ ಗಡಿ ದಾಟಿದ ಬಳಿಕ ಮತ್ತೊಂದು ರೂಪ ತಾಳುತ್ತದೆ. ಈಗ ನನ್ನನ್ನು ಕಾಡುತ್ತಿರುವ ಮುಖ್ಯ ಸಂದೇಹ ಅಥವಾ ನನಗಾಗುತ್ತಿರುವ ಮುಖ್ಯ ವಿಸ್ಮಯ ಇದೆ. ಭಾಷೆಯ ಈ ಅವಸ್ಥಾಭೇದಗಳನ್ನು ನಾನು ನನ್ನ ಹೆಂಡತಿ ದಾಟಿ ಬಂದಿದ್ದೇವೆ. ಉಪಮೆ, ರೂಪಕಗಳು ಎಲ್ಲೋ ಮೂಲೆಗುಂಪಾಗಿ, ಯಾವ ಕಾರಣಕ್ಕೂ ಕ್ಯಾತೆ ತೆಗೆದು ಜಗಳವಾಡುತ್ತಿದ್ದ ಸವಿಯನ್ನೆಲ್ಲಾ ಕಳೆದುಕೊಂಡು, ಈಗ ಒಂದು ರೀತಿಯ ಶಾಂತ ಜೀವನವನ್ನು ಸಾಗಿಸುತ್ತಿದ್ದೇವೆ ಎನ್ನಬಹುದು. ನಾನು ವಿವಾಹದ ತರುಣದಲ್ಲಿ ಅಂಟಿಕೊಂಡಿದ್ದ ಭಾಷೆಗೆ ಮರಳಿ ಹೋಗಲು ಯತ್ನಿಸುತ್ತಿದ್ದರೆ, ನನ್ನ ಹೆಂಡತಿ ಭಾಷೆಯನ್ನು ಈಗ ಪೂರ್ತಿ ಬದಲಾಯಿಸಿಕೊಂಡಿದ್ದಾಳೆ. ವೈವಾಹಿಕ ಜೀವನದ ಆರಂಭದಲ್ಲಿ ಇದ್ದ ಭಾಷೆಗೆ ನಾನು ಅಂಟಿಕೊಂಡಿದ್ದೇನೆ ಎಂದರೆ ಕೊಂಚ ಪ್ರೀತಿಗೆ ಬಾಗಿದ್ದೇನೆ ಎಂದುಕೊಳ್ಳೋಣ. ಹಾಗಂತ ಐವತ್ತರ ದಶಕದಲ್ಲಿ ಬಂದ ಅ.ನ.ಕೃ. ಕಾದಂಬರಿಗಳಲ್ಲಿ ಬರುವಂತೆ ಪತ್ನಿಯನ್ನು ಪ್ರೀತಿಯಿಂದ ಒಲಿಸಿಕೊಳ್ಳಲು ''ಡಾರ್ಲಿಂಗ್'' 'ಸ್ವೀಟ್' ಅಂತಲೋ 'ಚಿನ್ನ' ಎಂತಲೋ ಕರೆದಿಲ್ಲ. ಈಗಲೂ ಕರೆಯುತ್ತಿಲ್ಲ. ಅಕಸ್ಮಾತ್ ನಾನು ಪ್ರೀತಿಯಿಂದ 'ಚಿನ್ನ' ಎಂದು ಕರೆದರೆ ಅವಳು ನನ್ನನ್ನು'ಆಹಾ ಸುಳ್ಳ!' ಎಂದುಕೊಳ್ಳುತ್ತಾಳೆಯೇ ಹೊರತು ಸಂತೋಷ ಖಂಡಿತ ಪಡುವುದಿಲ್ಲ. ಅದು ಹೋಗಲಿ. ಅವಳು ಭಾಷೆಯನ್ನು ಬದಲಾಯಿಸಿಕೊಂಡಿದ್ದಾಳೆ ಎಂದು ಹೇಳಿದೆನಲ್ಲ ಇದು ಮಧ್ಯವಯಸ್ಸಿನಲ್ಲಿ ಮಹಿಳೆಯರಲ್ಲಿ ಕಾಣುವ ಬದಲಾವಣೆಯೇ ಎಂದು ನಾನು ಚಿಂತಿತನಾಗಿದ್ದೇನೆ! ಏನಪ್ಪ ಆ ಬದಲಾವಣೆ ಎಂದರೆ ನಾನು assertive sentence, interrogative sentence ಯಾವುದು ಮಾತನಾಡಿದರೂ, ಅವಳು ಬರೀ interrogative sentence ನಲ್ಲೇ ಉತ್ತರಿಸುತ್ತಾಳೆ. ಈಗ ಒಂದೆರಡು ಉದಾಹರಣೆ ಕೊಟ್ಟರೆ ಇದು ನಿಮಗೆ ಅರ್ಥವಾಗುತ್ತದೆ.

ನಾನು ''ಊಟ ರೆಡಿಯಾಗಿದೆಯಾ?''

ಅವಳು ''ಡೈನಿಂಗ್ ಟೇಬಲ್ ಮೇಲೆ ತಟ್ಟೆ ಹಾಕಿರೋದು ಕಾಣೋದಿಲ್ವೆ?''

ಈಗ ಹಳೆಯ ಸವಿ ನೆನಪು ಮೆಲಕು ಹಾಕುತ್ತಾ ''ಇನ್ನು ಸ್ವಲ್ಪ ಹಾಕಿಸಿಕೊಳ್ಳಿ ಇನ್ನು ಸ್ವಲ್ಪ ಬಡಿಸ್ತೀನಿ'' ಎಂದು ಹೇಳುತ್ತಿದ್ದ ಅವಳ ಮಾತುಗಳನ್ನು ಮತ್ತೆ ಮೆಲಕು ಹಾಕಬೇಕೆಂದು ಊಟ ಮಾಡುತ್ತಾ -

ನಾನು: 'ಪೂರಿ, ಬಟಾಣಿ ಸಾಗು ಬಹಳ ಚೆನ್ನಾಗಿದೆ' ಎನ್ನುತ್ತೇನೆ.

ಅವಳು: 'ಇನ್ನೆಷ್ಟು ಪೂರಿ ಬೇಕು?' ಎಂದು ಗಂಭೀರವಾಗಿ ಪ್ರಶ್ನಿಸುತ್ತಾಳೆ!

ನಾನು: 'ಆಫೀಸ್ ಮುಗಿಸಿಕೊಂಡು ಬರೋದು ಸ್ವಲ್ಪ ಲೇಟಾಗುತ್ತೆ'

ಅವಳು: 'ಯಾವತ್ತು ಹೊತ್ತಿಗೆ ಸರಿಯಾಗಿ ಮನೆಗೆ ಬಂದಿದ್ದೀರಿ?'

ಇತ್ತೀಚೆಗೆ ಇವಳು ಇಂಥ ಪ್ರಶ್ನಾರ್ಥಕ ವಾಕ್ಯಗಳನ್ನೇ ಏಕೆ ಬಳಸುತ್ತಿದ್ದಾಳೆ ಎಂಬುದರ ತಲೆಬುಡವೇ ಅರ್ಥವಾಗುತ್ತಿಲ್ಲ. ಮೊದಲು ನಾನು ತಲೆನೋವು ಎಂದರೆ ಹಣೆಗೆ ಸೆನ್ಸೂರ್ ಹಚ್ಚಿ, ಡೋಲಾಪಾರ್ ಮಾತ್ರೆ ಕೊಟ್ಟು, ಬಿಸಿಕಾಫಿ ತಂದು ಉಪಚರಿಸುತ್ತಿದ್ದಳು. ಈಗ ಪರಿಸ್ಥಿತಿ ಏನೋ ಏರುಪೇರಾಗಿದೆ. ಸಂಕ್ರಾಂತಿಯಾದ ಮಾರನೆಯ ದಿನವೋ ಏನೋ ನನ್ನ ದೇಹದ ಅಂತರರಾಷ್ಟ್ರೀಯ ಪರಿಸ್ಥಿತಿ ಹದಗೆಟ್ಟು ಮಧ್ಯಾಹ್ನ ಅರ್ಧ ದಿನ ರಜಾ ಹಾಕಿ ಮನೆಗೆ ಬಂದೆ. ಬಹಳ ಮುಖ್ಯವಾಗಿ ಅವಳ ಸಿಂಪತಿ ಗೈನ್ ಮಾಡಬೇಕು ಎಂಬ ಉದ್ದೇಶ ಗಂಡನಿಗೆ ಇದ್ದೇ ಇರುತ್ತದೆಯಲ್ಲ! ನಾನು ಮುಖ ಒಣಗಿಸಿಕೊಂಡು - 'ನನಗೆ ಯಾಕೋ ಮೈ ಚನ್ನಾಗಿಲ್ಲ!' ಎಂದೆ.

ಅವಳು: 'ಏನಾಗಿದೆ?'

ನಾನು: 'ನನಗೆ ಯಾಕೋ ಹೊಟ್ಟೆ ನೋಯುತ್ತಿದೆ...'

ಅವಳು: 'ಯಾಕೋ ಯಾಕೆ ಹೊಟ್ಟೆ ನೋಯುತ್ತೆ? ನೆನ್ನೆ ಸಂಜೆ ಎಳ್ಳು, ಕಡ್ಲೇಕಾಯಿಬೀಜ, ಬೆಲ್ಲದ ಎಷ್ಟು ಪ್ಯಾಕೆಟ್ ಮುಗಿಸಿದಿರಿ?'

ಇದು ನಮ್ಮಿಬ್ಬರ ಮಧ್ಯೆ ಮನಸ್ತಾಪ, ಕಲಹ ಎಂದು ಖಂಡಿತಾ ಭಾವಿಸಬೇಡಿ! ಉಪಚಾರಗಳೆಲ್ಲಾ ಮಾಮೂಲು! ಆದರೆ ಅವಳು ಬಳಸುವ ಭಾಷೆಯಲ್ಲಿ ಮಾತ್ರ ಹೆಚ್ಚು ಪ್ರಶ್ನಾರ್ಥಕ ವಾಕ್ಯಗಳು ಸೃಷ್ಟಿಯಾಗುತ್ತವೆ. ಮನೆಯಲ್ಲಿ ಪುರುಷ ದಬ್ಬಾಳಿಕೆ ಯುಗ ಮುಗಿದು, ಮಹಿಳೆ ಮನೆಯ ಸಾಮ್ರಾಜ್ಯದ ಸರ್ವಾಧಿಕಾರ ಪಡೆದು ಸಿಂಹಾಸನವನ್ನು ಆಕ್ರಮಿಸುವ ಸೂಚನೆಯ ಈ ಮಧ್ಯವಯಸ್ಸಿನಲ್ಲಿ ಸ್ತ್ರೀ ಬಳಸುವ ಪ್ರಶ್ನಾರ್ಥಕ ವಾಕ್ಯಗಳು? ಬಲ್ಲವರು ತಿಳಿಸಿ.

★★★

ಮೀಸೇ ಮಸಲತ್ತು

– ಎಂ.ಎಸ್.ಕೆ.

"ಅಂಬಲೀ ಕುಡಿಯೋನಿಗೆ ಮೀಸೆ ಹಿಡಿಯೋನೊಬ್ಬ"

"ಕೈಲಾಗದಿದ್ದರೆ ಯೆಲ್ಲಾದರೂ ಹೋಗಿ ಮೀಸೇ ಬೋಳಿಸಿಕೋ"

"ನೋಡಿದ್ಯಾ ಅವನ್ನಾ. ಮೀಸೇಲೇ ಮುಸೀ ಮುಸೀ ನಗ್ತಿದ್ದಾನೇ"

ಅಂಬಲೀ ಅಂದರೆ ನಮ್ಮ ಪೂರ್ ಮಾನ್ಸ್ ಫುಡ್. ಅರ್ಥಾಥ್ ಗಂಜಿ. ಅದನ್ನ ಕುಡಿಯೋದು ಬೋಸೀ ಅಥವಾ ಬೋಕೀಲಿ ಹಾಕಿಕೊಂಡು. ಆ ಬೋಕೀನ ಎರಡು ಕೈಲೂ ಹಿಡೀಬೇಕು. ಆಗ ಬಾಯಿಗೆ ಅಡ್ಡಬರೋ ಮೀಸೇನ ಹೇಗೆ ಹಿಡಿದು ಮೇಲೆತ್ತೋದು? ಇನ್ನೊಬ್ಬನ ಹೆಲ್ಪ್ ಬೇಡ್ವೇ? ಇವನು ಕುಡೀವಾಗ ಅವನು ಮೀಸೆ ಹಿಡಿದೆತ್ತುತ್ತಾನೆ. ಅವನು ಕುಡೀವಾಗ ಇವನು ಹೆಲ್ಪ್ ಮಾಡ್ತಾನೆ. Mutual Help and team work. ಈಥರ ನೋಡ್ದಾಗ ಮೀಸೆ ಹಿಡಿಯೋನು ಬೇಕೇ ಬೇಕು ಅನ್ನೋಲ್ವೇ?

ಪರೀಕ್ಷೇಲಿ ಫೇಲಾದಾಗ, ಕೆಲಸ ಸಿಕ್ಕದಿದ್ದಾಗ, ಸಿನೀಮಾ ಟಿಕೆಟ್ ಸಿಕ್ಕದೆ ವಾಪಸ್ ಬಂದಾಗ "ಮೀಸೇ ಬೋಳಿಸಿಕೋ ಹೋಗು" ಅನ್ನೋದು ಶುದ್ಧ ತಪ್ಪು. ಬಹಳಷ್ಟು ಜಪಾನೀ ಮತ್ತು ಚೀಣೀಯರಿಗೆ ಮೀಸೇನೇ ಇಲ್ಲಾ. ಅವರು ಫೇಲಾದಾಗ ಹೇಗೆ ಮೀಸೆ ಬೋಳಿಸಿಕೋತಾರೆ? ಮೀಸೆ ಇದ್ದರೆ ತಾನೆ ಬೋಳಿಸಿಕೊಳ್ಳೋದು? ಪರೀಕ್ಷೇಲಿ ಫೇಲಾಗೋದಕ್ಕೂ ನಮ್ಮ ಪೂರ್ ಮೀಸೇಗೂ ಏನು ಸಂಬಂಧಾ? ಅದೇನಾದರೂ ಬಂದು "ಪರೀಕ್ಷೆಗೆ ಓದಿಕೋಬೇಡ, ಕೆಲಸದ Interview ನಲ್ಲಿ ಬೆಬ್ಬೆಬ್ಬೆ ಅನ್ನು" ಅಂತ ಹೇಳಿಕೊಡುತ್ತಾ? for no reason at all ನಮ್ಮ ಮೀಸೆ ಬೋಳಿಸಿಕೊಳ್ಳೋದು illogical.

ನಗುವಾಗ ತುಟೀ ಅಲ್ಲಾಡುತ್ತೆ. ಅಲ್ಲಿರೊ ಮೀಸೇನೂ ಅಲ್ಲಾಡುತ್ತೆ. ಅದಕ್ಕೇ "ನೋಡ್ದ್ಯಾ ಅವನ ಮುಸಿ ಮುಸೀ ನಗು" ಅನ್ನೋದಾ? ಹಾಗಾದರೇ ಮೀಸೆ ಬೋಳಿಸಿ ನಗಬೇಕಾ? ಅಥವಾ ಮೀಸೆ ಇರೋರಿಗೇ ಬರೀ ಅಳೋಕ್ಕೆ ಮಾತ್ರ ಅವಕಾಶ ನಗಲೇಕೂಡದೂಂತ ರೂಲ್ಸ್ ಇದೆಯಾ?

ಇಂಗ್ಲಿಷ್ ಧನಿಕರ ಮನೇಲಿರೊ ಬಟ್ಲರ್‌ಗಳಿಗೆ ಎರಡು ವರ್ಜ್ಯ. ಒಂದು ಮೀಸೆ. ಎರಡು ಕನ್ನಡಕ. ಕಾರಣ: ಬಟ್ಲರ್ ಮೀಸೇ ಬಿಟ್ಟರೆ ಅವನು ಅಮೆರಿಕನ್ millionaire ಥರ ಕಾಣ್ತಾನೆ. ಇದು ಬ್ರಿಟಿಷ್ ಮನೆಯೊಳಗೆ ಸಲ್ಲ. ಅವನು ಕನ್ನಡಕ ಹಾಕಿದರೆ ಮನೆಯಲ್ಲಿ ನೋಡಬಾರದ್ದೆಲ್ಲಾ ನೋಡ್ತಾನೆ. ಇದೂ ಸಲ್ಲ.

ಮೀಸೇಲಿ ನಾನಾಥರ. ಹದಿಮೂರರಿಂದ ಹದಿನಾರನೇ ಶತಮಾನದವರೆಗೆ ಇಡೀ ವಿಶ್ವವನ್ನೇ ಅಲ್ಲಾಡಿಸಿದ ತೈಮೂರ್ ಲೇನ್, ಚೆಂಘೀಸ್ ಖಾನ್ ಇವರ ಮೀಸೆಗಳು ಎಡ್ಡೂ ಕಡೆ ಬಾಗಿ ಅವರ ಗಲ್ಲದ ಕೆಳಗೆ ಬಂದಿದ್ದವು. ಅಂಥವರನ್ನ ನಂಬಲೇ ಕೂಡದು.

ಗಿರ್ಜಾ ಮೀಸೆ: ಇದು ನಮ್ಮ ಹಿಂದಿನ ರಾಜ ಮಹಾರಾಜರುಗಳು ಧರಿಸುತ್ತಿದ್ದ ಸ್ಟೈಲ್. ದಪ್ಪ ಮೀಸೆಯ ತುದಿಯಲ್ಲಿ ಎರಡು ನಿಂಬೇ ಹಣ್ಣು ಇಟ್ಟು ಕುಣಿಸುತ್ತಿದ್ದರಂತೆ. ಈಗಲೂ ನಮ್ಮ ಪೋಲೀಸಿನವರಲ್ಲಿ ಕೆಲವರು ಈ ಥರ ಬಿಟ್ಟಿರುತ್ತಾರೆ. ಅವರಿಗೆ ಅದಕ್ಕೇ ಸ್ಪೆಶಲ್ ಅಲೋಯನ್ಸ್ ಇದೆಯಂತೆ. ಎಷ್ಟೋ ಗೊತ್ತಿಲ್ಲಾ.

ಹಿಟ್ಲರ್ ಮೀಸೆ: ಚಿಟ್ಟೆಯಂತೆ ತುಟಿ ಮಧ್ಯದಲ್ಲಿ ಇರೊ ಮೀಸೆ. ಇದನ್ನು ಮೊದಲು ತೋರಿಸಿದ್ದು ಚಾರ್ಲೀ ಚಾಪ್ಲೀನ್ - ತನ್ನ ಮೂಕೀ ಸಿನೀಮಾದಲ್ಲಿ ಚಾರ್ಲೀ ಮೀಸೆ ಅನ್ನೋ ಬದಲು ಹಿಟ್ಲರ್ ಮೀಸೆ ಅನ್ನೋದು ಅನ್ಯಾಯ.

ಮಂತ್ರವಾದಿ ಮೀಸೆ: ಮೀಸೆ ಇಲ್ಲದ ಮಂತ್ರವಾದಿ ಹಾಗೂ ಬುಡುಬುಡುಕಣ್ಣರೇ ಇಲ್ಲಾ. ಸೊಂಪಾಗಿ ಬೆಳಿಸಿ ತುದಿಯನ್ನು ತೀಡಿ ತೀಡಿ ಚೂಪಾಗಿ ಮಾಡಿದ ಮೀಸೆ ಇಲ್ಲದವ ಮಂತ್ರವಾದಿಯೇ? (''ಬೂದಿಯಲ್ಲಿ ಬಿದ್ದ ಶ್ವಾನ ಶಿವ ಭಕ್ತನೇ'' ಅಂತ ದಾಸರು ಕೇಳಿದ ಹಾಗೆ)

1950 ರಲ್ಲಿ ರಾಜ್‌ಕಪೂರ್ ಸಿನಿಮಾನೋಡಿ ಅವನ ಥರ ಮೀಸೇ ಬಿಡದ ಹುಡುಗರೇ ಇರಲಿಲ್ಲ. ಇದನ್ನು ನೋಡಿ ನಮ್ಮ ಮೇಷ್ಟ್ರು ''ತುಟೀ ಮೇಲೇ ಏನೋ ಅದು ಕಂಬಳಿಹುಳು'' ಅಂತ ಗೇಲಿ ಮಾಡಿದ್ದು ಇನ್ನೂ ಚೆನ್ನಾಗಿ ನೆನಪಿದೆ. ''ಬಿಟ್ರೆ ಸರಿಯಾಗಿ ಬಿಡಿ ಮೀಸೆ. ಇಲ್ಲಾ ಬೋಳಿಸಿಕೊಳ್ಳಿ.'' ಅಂತಾನೂ ಅಂತಿದ್ರು.

ನಮ್ಮ ಸ್ನೇಹಿತರೊಬ್ಬರು ತುಂಬಾ ಸೊಂಪಾಗಿ ಮೀಸೆ ಬೆಳೆಸಿದ್ದರು. ಅವರಿಗೆ ಬಹು ಬೇಗ ತಲೆ ಬೆಳ್ಳಗಾಯಿತು. ಅವರ ದುಃಖ ತಲೆ ಬೆಳ್ಳಗಾಗಿದ್ದಕ್ಕಲ್ಲ, ಮೀಸೆ ಬೆಳ್ಳಗಾಗಿದ್ದಕ್ಕೆ. ತಲೆಯನ್ನು Ignore ಮಾಡಿ ಮೀಸೆಗೆ ಬಣ್ಣ ಹಚ್ಚುತ್ತಿದ್ದರು. ಅವರ ಸಮಜಾಯಿಶೀ ''ನೋಡ್ರೋ ನನ್ನ ಮೀಸೆ ನನ್ನ ತಲೆ ಕೂದಲಿಗಿಂತ 20 ವರುಷ younger. ಅದಕ್ಕೇ ಈ ಬಣ್ಣ'' ಅನ್ನುತ್ತಿದ್ದರು.

ಇನ್ನೊಬ್ಬರು ತಮ್ಮ ದೇಹ ಬಡಕಲಾದರೂ ಮೀಸೆ ದಪ್ಪ ಮಾಡುತ್ತಿದ್ದರು. ಅವರ ಸ್ನೇಹಿತರು ಅವರಿಗೆ ಕೊಡುತ್ತಿದ್ದ ಉಪದೇಶ ''ಸ್ವಲ್ಪ ಹುಶಾರಾಗಿರಪ್ಪ ಕೈಲಿ ಒಂದು ಕೋಲು ಹಿಡಿದು ಹೋಗಪ್ಪಾ. ನಿನ್ನ ಮೀಸೆ ಮುಂಭಾರದಿಂದ ಮುಗ್ಗರಿಸಿ ಬಿದ್ದಿಯಾ. ಜೋಕೇ'' ಅಂತ.

ಇದು ಹಳೇ ಜೋಕು. ಒಪ್ಕೋತೀನಿ. ಅಕ್ಬರ್ ಕೇಳಿದನಂತೆ "ಬಾದಶಹನ ಮೀಸೆ ಎಳೆದವರಿಗೆ ಯಾವ ಶಿಕ್ಷೆ? ಛಡಿ ಏಟಾ ಇಲ್ಲಾ ಕುದಿಯೋ ಬಾಂಡಲೇನಾ?" ಅಂತ. ಬೀರ್ಬಲ್ ಹೇಳಿದಂತೆ "ಜಹಾ ಪನಾ. ಇದು ಬಹಳ ಹಳೇಕಾಲದ ಪೂರ್ ಜೋಕ್. ನಿಮ್ಮ ಮೀಸೆ ಎಳೇದೋನನ್ನು ಮುಂದೆ ನಿಮ್ಮ ಉತ್ತರಾಧಿಕಾರಿ ಮಾಡ್ಬಿಡಿ." ನೋಡಿದಿರಾ ಯಾವ high level discussions ನಡೀತಿತ್ತು ಮುಘಲ್ ಆಸ್ಥಾನದಲ್ಲಿ?

ಹಾಗೆ ನೋಡಿದರೆ ನಮ್ಮ ಪಾರ್ಲಿಮೆಂಟ್, ಅಸೆಂಬ್ಲೀಗಳಲ್ಲಿ Discussions improve ಆಗಿದೆಯಾ? ಇಲ್ವಾ? ಈ level ಹೀಗೇ ಮುಂದುವರಿದರೆ ಮುಂದೆ ಯಾವ level ಗೆ ಬರಬಹುದೂಂತ ಯೋಚಿಸಿದರೆ ಮೈ ಝುಂ ಅನ್ನುತ್ತೆ, ನಾಲಿಗೆ ಒಣಗುತ್ತೆ ಅಲ್ವಾ?

★★★



ಜಾಂಟಿ ರ್ಹೋಡ್ಸ್ ತರಹಾ ಅಳಿಯನ್ನ ಹುಡುಕ್ರೀ

ಉಗುಳು

– ಗುಂಡೂರಾವ್

ಯಾಕೋ ನಾಲ್ಕು ದಿನದಿಂದ ಕೆಮ್ಮು ಹೆಚ್ಚಾಗಿದೆ. ಕೆಮ್ಮಿ, ಕೆಮ್ಮಿ ಸಾಕಾಗಿದೆ. ನಾನು ಹುಟ್ಟಿದಾರಭ್ಯ ಕೆಮ್ತಾನೇ ಇದೀನೇನೊ, ಅನ್ನಿಸಿಬಿಟ್ಟಿದೆ. ಅದು ಹೇಗಾದರೂ ಆಗಲಿ ಅಂದರೆ, ಕೆಮ್ಮಿದ ನಂತರ ಉಗುಳೋದು ಬೇರೆ. ಕೆಮ್ಮೋದು - ಉಗುಳೋದು ಜೊತೆ ಜೊತೆಯಾಗೇ ಹೋಗ್ತಾ ಇದೆ. ಹೀಗಾಗಿ, ಯಾರ್ನಾರ ಜ್ಞಾಪಿಸಿಕೊಂಡು ಉಗುಳೋಕೆ ಬಾಯ್ನಲ್ಲಿ ಉಗುಳೇ ಇಲ್ಲದಾಗಿದೆ.

ಈ ಪರಿಸ್ಥಿತೀಲಿ ಇರೋವಾಗಲೇ, ನನಗೆ ಉಗುಳಿನ ಮಹತ್ವ, ಪ್ರತಿಯೊಬ್ಬನ ಜೀವಮಾನದಲ್ಲಿ ಉಗುಳಿನ ಪ್ರಾಮುಖ್ಯತೆ, ಅದಿಲ್ಲದಿದ್ದರೆ ಬದುಕುವುದೇ ಹೇಗೆ ಅಸಾಧ್ಯವಾಗುವ ಸಾಧ್ಯತೆಗಳಿವೆ ಎಂಬ ಕಟು ಸತ್ಯ ಬಂದು ಮುಖಕ್ಕೆ ಉಗಿದ ಹಾಗಾಯಿತು. ಇಷ್ಟು ಗಹನವಾದ ವಿಷಯದ ಬಗ್ಗೆ ಒಂದು ಅಧ್ಯಾಯನವನ್ನು ಮಾಡುವ ಪ್ರೇರಣೆಯಾಗಿ, ಮಾಡಿ, ಈ ಕೆಳಕಂಡ report ನ್ನು ಸಾರ್ವಜನಿಕರ ಹಿತಾಸಕ್ತಿಯಿಂದ ಬಹಿರಂಗಪಡಿಸಿ, ಮಹತ್ವವಾದ ಉಗುಳಿಗೆ ಸಮಾಜದಲ್ಲಿ ಸಿಗಬೇಕಾಗಿರುವ ಸ್ಥಾನ ಸಿಕ್ಕಲಿ ಎಂದು ಹಾರೈಸುತ್ತೇನೆ.

ಅಧ್ಯಯನಕ್ಕೆ ತೆಗೆದುಕೊಂಡ points ಹೀಗಿವೆ.

ಉಗುಳು ಅಂದರೆ ಏನು? ಅದರ ವಿಧಗಳೆಷ್ಟು?

ಅದು ಎಲ್ಲಿ ಹುಟ್ಟಿತು?

ಅದು ಎಲ್ಲಿಗೆ ಹೋಗುತ್ತೆ?

ಅದರಿಂದ ನಮಗೇನು ಪ್ರಯೋಜನ ಮತ್ತು

ಅದಿಲ್ಲದಿದ್ದರೆ ಆಗುವ ಅನಾಹುತಗಳೇನು?

ಅದರಿಂದ ಆಗುವ ಪ್ರಯೋ(ಗ)ಜನ.

ಹೀಗೆ ಮುಂತಾದ ಹತ್ತು ಹಲವು points ಗಳನ್ನು ಗಮನದಲ್ಲಿಟ್ಟು ಆಳವಾದ ಅಧ್ಯಯನವನ್ನು ಮಾಡಿದ್ದಾಯಿತು.

ಉಗುಳು ಮಾನವ ಜಾತಿಯ ಹಾಗೂ ಹಲ್ಲು, ನಾಲಿಗೆ ಇರುವ ಸಕಲ ಜಂತುಗಳ ಬಾಯಿಯಲ್ಲಿಯೇ ಜನ್ಮ ತಾಳುತ್ತದೆ. ಇದಕ್ಕೆ ಮರ್ಯಾದೆಯ ಹೆಸರು ಜೊಲ್ಲು. ಇದು ನಿಮಗೆ ಬೇಕಾಗಲಿ, ಬೇಡವಾಗಲಿ, ಹುಟ್ಟಿದಂದಿನಿಂದ ಸಾಯೋವರೆಗೆ ಉತ್ಪತ್ತಿಯಾಗುತ್ತಲೇ ಇರುತ್ತದೆ.

ಈ ಉಗುಳು ಅಥವಾ ಜೊಲ್ಲು ನಾವು ತಿನ್ನಬಾರದ್ದನ್ನು ತಿಂದಾಗಲೂ ಅದನ್ನು, ಪಚನವಾಗಿ ಜೀರ್ಣವಾಗಲು ಸಹಾಯ ಮಾಡುತ್ತೆ. ಬಾಯಿಗೆ ಬಂದ ಹಾಗೆ ಮಾತಾಡಲು ಬೇಕಾದ ತೇವವನ್ನು ಒದಗಿಸುತ್ತದೆ, ಮಾತಾಡಿಸಿ ತಾಪತ್ರಯಕ್ಕೆ ಸಿಕ್ಕಿ ಹಾಕಿಕೊಳ್ಳುವಂತೆ ಮಾಡುತ್ತದೆ. ಆಡಬಾರದ್ದನ್ನು ಆಡಿ ಪೀಕಲಾಟಕ್ಕೆ ಸಿಕ್ಕಿದಾಗ, ಈ ಜೊಲ್ಲು ಯಾತಕ್ಕಾದರೂ ಇತ್ತೋ, ಇಲ್ಲದಿದ್ದರೆ ಬಾಯೊಣಗಿ ಮಾತಾಡದೆ ಹಾಯಾಗಿ ಇರಬಹುದಿತ್ತು ಅನ್ನಿಸದಿರುವುದಿಲ್ಲ. ಈ ಜೊಲ್ಲಿನ ಉತ್ಪತ್ತಿ, ತುಂಬ ಕೋಪ ಬಂದಾಗ, ಹೆದರಿಕೆಯಾದಾಗ ಇಲ್ಲ ಸತ್ತಾಗ ಮಾತ್ರ ಬಾಯಿಂದ ನಾಪತ್ತೆಯಾಗುತ್ತದೆ.

ಈ ಉಗುಳು ಬಾಯಲ್ಲಿ ಇರುವುದರಿಂದ ಒಳ್ಳೆ ಮಾತಾಡಲು, ಸಂಗೀತ ಹೇಳಲು, ಶ್ಲೋಕಗಳನ್ನು ಹೇಳಿ ಉದ್ಧಾರವಾಗುವುದಕ್ಕೂ ಸಹಾಯ ಆಗೋದು ನಿಜ. ಆದರೆ ನನ್ನ experience ನಲ್ಲಿ, ಆ ಕೆಲಸಗಳಿಗೆ ಉಪಯೋಗಿಸಿಕೊಳ್ಳುವವರ ಸಂಖ್ಯೆ ಬಹಳ ಕಡಿಮೆ. ಎದುರಿಗಿಲ್ಲದವರ ಬಗ್ಗೆ ಮಾತಾಡಲು ಉಪಯೋಗವಾಗುವುದೇ ಹೆಚ್ಚು.

ಮೇಲೆ ವಿವರಿಸಿದೆಲ್ಲಕ್ಕಿಂತ ಮುಖ್ಯವಾದದ್ದು, ಮಾನಸಿಕ ಶಾಂತಿಗೆ ಈ ಉಗುಳು ಬಹಳ ಅತ್ಯಗತ್ಯ. ಹ್ಯಾಗೆ ಅಂತೀರ? ಓದಿ, ನಮಗ್ಯಾರ ಮೇಲಾದರೂ ಕೋಪ ಬರುತ್ತೆ ಅಂತ ಅನ್ಕೊಳ್ಳಿ. ಆಗ ಹೊಡೀಬೇಕು ಅವರನ್ನು ಅನ್ನಿಸುತ್ತೆ. ಆದರೆ ಹೊಡೆದರೆ ಬೇರೆ ಅನಾಹುತಗಳಾಗಿ ಪೋಲೀಸ್ ತನಕ ಹೋಗಬಹುದು. ಆದರೆ ನಮ್ಮ ಕೋಪ ತೋರಿಸಲೇಬೇಕು, ಇಲ್ಲದಿದ್ದರೆ ನಮ್ಮ ಮನಸ್ಸಿಗೆ ಶಾಂತಿಯಿಲ್ಲ. ಆಗ ನೋಡಿ ಈ ಉಗುಳು ನಮ್ಮ ಸಹಾಯಕ್ಕೆ ಬರುತ್ತೆ. ಉಗುಳಿನ ಸಹಾಯದಿಂದ ಬಾಯಿಗೆ ಬಂದಂತೆ ಬೈಯ್ಯಬಹುದು. ಅದಿಲ್ಲದಿದ್ದರೆ ಬ್ರಹ್ಮಾಸ್ತ್ರದಂತೆ, ಅವರನ್ನು 'ಮುಖದ ತುಂಬ ಉಗುಳಿ' ಆಚೆ ಅಟ್ಟಬಹುದು. ಇದಕ್ಕಿಂತ ಹೆಚ್ಚಿನ ಹಾಗೂ effective ಆಗಿ ನಮ್ಮ ಕೋಪ ಪ್ರಕಟಿಸಲು ದಾರಿಯೇ ಇಲ್ಲ. ಹಾಗೆ ಉಳಿಸಿಕೊಂಡು ಹೋದವ ಪುನಹ ವಾಪಸ್ ಬರುವ ಸಾಧ್ಯತೆ ಬಹಳ ಕಡಿಮೆ.

ಅಷ್ಟೇ ಯಾಕೆ? ನಮ್ಮ ಕಛೇರಿಯಲ್ಲಿ, ನಾವೇನಾದರೂ ತಪ್ಪು ಮಾಡಿದ್ದೇವೆ ಅಂತ ನಮ್ಮ Boss ಗೆ ಅನ್ನಿಸಿದರೆ, ಅವರಿಗೆ First ಬರೋದು ಕೋಪ. ಆ ಕೋಪಾನ ಹ್ಯಾಗೆ ಪ್ರಕಟಿಸುತ್ತಾರೆ ಹೇಳಿ. ನಮ್ಮನ್ನ ಉಗೀತಾರೆ ಅಷ್ಟೇ. Boss ಉಗೀತಾರೆ ಅಂತಾನೆ, ಸಿಬ್ಬಂದಿ ಯಾವಾಗಲೂ ದಕ್ಷತೆಯಿಂದ (?) ಕೆಲಸ ಮಾಡಲು ಹಾಗೂ ಶಿಸ್ತಿನಿಂದ ಇರಲೂ ಪ್ರಯತ್ನಿಸುತ್ತಾರೆ. ಆದ್ದರಿಂದ officeಗಳು ಒಳ್ಳೇ ಹೆಸರು ತೆಗೆದುಕೊಳ್ಳಲು boss ನ ಉಗುಳೇ ಕಾರಣ.

ಅದಿರ್ಲಿ, ಮಗ ರಾತ್ರಿ ಅವೇಳೆ ಹೊತ್ನಲ್ಲಿ, ಪಾರ್ಟಿ ಮುಗಿಸಿಕೊಂಡು ಮನೆ ಕಡೆ

ಹೊರಟಾಗ ಮೊದಲು ಅವನ ತಲೇಲಿ ಬರೋದು, ಮನೆ ತಲುಪಿದ ತಕ್ಷಣ ಸಿಕ್ಕುವ ಅಪ್ಪನ ಉಗಿತವೇ ಅಲ್ಲವೇ? ಅದು ತಲೇಲಿ ಬಂದದ್ದೇ ತಡ ಪಾರ್ಟಿಯ ಮಜ ಎಲ್ಲಾ ಇಳಿದುಹೋಗುತ್ತೆ. ಈ ಅಪ್ಪನ ಉಗಿತವೇ ಮಕ್ಕಳ ಎಲ್ಲಾ ಮಜಾನೂ ನೀಗಿಸಿಬಿಡುತ್ತೆ. ಮಕ್ಕಳು ಯಾವುದಕ್ಕೂ ಹೆದರದಿದ್ದರೂ ಅಪ್ಪನ ಉಗುಳಿಗೆ ಹೆದರೇ ಹೆದರ್ತಾರೆ ಅಲ್ಲವಾ? ಜೀವನದಲ್ಲಿ ಅತಿ ಅವಮಾನ ಆಗೋದು ಯಾರಾದರೂ ಉಗಿದಾಗ. ಅದೂ ಉಳಿದವರ ಸಮ್ಮುಖದಲ್ಲಿ! ಅದಕ್ಕಿಂತ ಹೆಚ್ಚಿನ ಅವಮಾನವೇ ಇಲ್ಲ ಅಂತ ನನ್ನ ಅನಿಸಿಕೆ. ಏನೇ ಮಾಡಿದರೂ ಉಗಿಸ್ಕೊಳ್ಳೊ ಅಂತ ಕೆಲಸ ಮಾಡಬಾರ್ದು ನೋಡಿ.

ಇನ್ನು ಉಗಿತದ ಮಾದರಿಗಳು, ಉಗುಳುವ ವಿಧಾನಗಳು. ಯಾವ ಮಾದರಿಯ ಉಗುಳನ್ನು ಯಾವಾಗ ಉಪಯೋಗಿಸಿದರೆ ಗರಿಷ್ಟ effect ಇರುತ್ತೆ ಅನ್ನೋದು. ಮೊದಲನೆಯದಾಗಿ, ಸಾಮಾನ್ಯ ಉಗಿತ; ಇದು general ಆಗಿ ಸಾಮಾನ್ಯ ವಿಷಯಗಳಲ್ಲೂ ಉಪಯೋಗಿಸ್ತಾರೆ. ಉಗಿದವರು, ಉಗಿಸಿಕೊಂಡವರೂ ಇದನ್ನು ಬೇಗ ಮರೆಯುವ ಸಾಧ್ಯತೆಗಳು ಇದೆ.

ಎರಡನೆಯದು, ಕ್ಯಾಕರಿಸಿ ಉಗಿಯೋದು, ಇದನ್ನು ತುಂಬ ಕೋಪ ಬಂದಾಗ ಉಪಯೋಗಿಸುತ್ತಾರೆ. ಆದರೆ ಕೋಪ ಹೋದ ಮೇಲೆ ಇದರ effect ಕಡಿಮೆ. ಈ ಉಗಿತದಲ್ಲೇ ಇನ್ನೊಂದು ವಿಧ. ಕ್ಯಾಕರಿಸಿ ತೊಂಟಬೆರಕೆಯಾಗಿ ಉಗಿಯುವುದು, ಥೂ...ಥೂ...ಥೂ... ಇದು ತುಂಬ ಅಸಹ್ಯ ತರುವಂತಹದು. ಹೀಗೆ ಉಗಿಯಲು ಎಲ್ಲಾ ಕೈಯ್ಯಲ್ಲೂ sorry ಎಲ್ಲರ ಬಾಯಲ್ಲೂ ಆಗುವುದಿಲ್ಲ. Cigarette ಅಥವಾ ಬೀಡಿ ಸೇದುವವರಿಗೆ ಮಾತ್ರ ಸುಲಭ.

ಮೂರನೆಯದು, ಎಲೆ ಅಡಿಕೆ ಹಾಕಿಕೊಂಡು ಉಗಿತ. ಇದು ಈಗೀಗ ರಾಜಕೀಯದಲ್ಲಿ, ರಾಜಕಾರಣಿಗಳಲ್ಲಿ ಬಹಳ ಉಪಯೋಗದಲ್ಲಿದೆ. ಅವರುಗಳು ಉಗಿತವನ್ನು ಆಗಿ ಮಾಡಲು ಮತ್ತು ಉಗಿಸಿಕೊಂಡವರ ಮೇಲೆ ಕಲೆ ಉಳಿಯಬೇಕೆಂಬ ಉದ್ದಿಶ್ಯದಿಂದಲೂ ಉಪಯೋಗಿಸುತ್ತಾರೆ. ಈ ಉಗಿತದಲ್ಲೇ ವಿಧಗಳುಂಟು. ಸಾಮಾನ್ಯ ಎಲೆ ಅಡಿಕೆ ಉಗಿತ, ಜ಼ರ್ದಾ ಹಾಕಿದ ಎಲೆ ಅಡಿಕೆ ಉಗಿತ, ಬೆಂಗಾಲಿ ಎಲೆ ಅಡಿಕೆ ಉಗಿತ, ಬನಾರಸಿ ಎಲೆ ಅಡಿಕೆ ಉಗಿತ, ಬಿಹಾರಿ, ಗುಜರಾತಿ, ಮದ್ರಾಸಿ.... ಹೀಗೆ ಆಯಾ ರಾಜ್ಯಗಳಲ್ಲಿ ಪ್ರಾಮುಖ್ಯತೆ ಗಳಿಸಿರುವ ಉಗಿತಗಳೂ ಇವೆ.

ಮೇಲೆ ಹೇಳಿದವೇ ಅಲ್ಲದೆ, ಬೇರೆ ರೀತಿಯ ಉಗಿತಗಳೂ ಇವೆ. ಈ ವಿಷಯದ ಬಗ್ಗೆ ಬೇರೆ ಪ್ರತ್ಯೇಕ ಒಂದು ಲೇಖನವನ್ನೇ ಬರೆಯಬೇಕಾಗಿತ್ತು. ಕಾರಣ ವಿಷಯ ಬಹಳ ವಿಶಾಲವಾದದ್ದು. ಈ ಸಂದರ್ಭಕ್ಕೆ ಇದು ಸಾಕು.

ಮೇಲೆ ಹೇಳಿದ ವಿಧ ವಿಧವಾದ ಉಗಿತಗಳನ್ನು ಸಮಯೋಚಿತವಾಗಿ, ಬೇಕಾದ effectಗಾಗಿ, ಸಾಮಾನ್ಯದಿಂದ ಅತಿ ಕ್ರೂರವಾದ ಶಿಕ್ಷೆ ವಿಧಿಸಲು ಉಪಯೋಗಿಸುತ್ತಾರೆ. ಏನೇ ಹೇಳಿ, basically ಉಗಿತ - ಉಗಿತವೇ grades ವ್ಯತ್ಯಾಸವಿರಬಹುದು.

'ಉಗಿದು ಜಾತಿ ಕೆಡಿಸು'ವುದಕ್ಕೂ, 'ಉಗಿದಟ್ಟು'ವುದಕ್ಕೂ 'ಉಗಿದು ಬಿಡುವುದಕ್ಕೂ' ಸಲಹೆಗಳನ್ನು ಕೊಡುವುದು ಸಾಮಾನ್ಯ.

ಒಂದು ವಿಷಯದಲ್ಲಿ ಹುಷಾರಾಗಿರಬೇಕು. ಯಾರನ್ನು ಉಗಿಯಬಾರದೋ ಅವರನ್ನು ಉಗಿಯಬಾರದು. ಹಾಗೇನಾದರೂ ಮಾಡಿದಾಗ ಅದು 'ರಿವರ್ಸ್' ಆಗುವ ಸಾಧ್ಯತೆಗಳೇ ಜಾಸ್ತಿ. ಈ ಸಂದರ್ಭದಲ್ಲಿ 'ಚಂದ್ರನ ಮೇಲೆ ಉಗುಳಿದರೆ, ನಮ್ಮ ಮುಖದ ಮೇಲೆ ಬೀಳುತ್ತೆ' ಅನ್ನು ನಾಣ್ಣುಡಿಯನ್ನು ಜ್ಞಾಪಕದಲ್ಲಿಡುವುದು ಉತ್ತಮ. ಅಷ್ಟು ಯಾರನ್ನಾದರೂ ಉಗಿಯಲೇಬೇಕು ಅನ್ನಿಸಿದ್ದರೆ, ಮನಶ್ಶಾಂತಿಗಾಗಿ, ಅವರೆದುರಿಗಿಲ್ಲದಾಗ ಅವರನ್ನು ನೆನಪಿಸಿಕೊಂಡು ಬೇಕಾದ grade ಉಗಿತವನ್ನು ಉಗಿಯಬಹುದು. ಇದರಿಂದ ಯಾವ ಬಾಧಕವೂ ಇಲ್ಲ, ಮನಸ್ಸಿಗೆ psychological ಶಾಂತಿಯೂ ದಕ್ಕುತ್ತೆ.

ಕೆಲವರು ಉಗಿಸಿಕೊಂಡವರು, ವೈಯಕ್ತಿಕ ಕಾರಣದಿಂದ ಸಹಿಸಿ, ತೋರಿಸಿಕೊಳ್ಳುವುದಿಲ್ಲ. ಅಂತಹ ಸಮಯದಲ್ಲಿ 'ಅಯ್ಯೊ ಬಿಡು, ಬಾಯಿಯ ಎಂಜಲು, ಬಾಯಿಗೆ ಬಂದಂತೆ' ಅಂತ ಅಂದು ತೇಲಿಸಿ ಬಿಡುತ್ತಾರೆ.

ನಮ್ಮ ಸಮಾಜದಲ್ಲಿ ಉಗುಳಿಗೆ ಬಹಳ ಮರ್ಯಾದೆ. ಅದರಿಂದ ಆದಷ್ಟು ದೂರವಿರಲು ಪ್ರಯತ್ನಿಸುತ್ತಾರೆ. ಅಷ್ಟೇ ಅಲ್ಲದೆ ಒಬ್ಬರ ಉಗುಳನ್ನು ಇನ್ನೊಬ್ಬರು ದಾಟುವುದು ಸಹ ಇಲ್ಲ.

ಇಂತಹ, ಬಹುಮುಖದ, ಬಹು ಮುಖ್ಯದ, ಜೀವನದಲ್ಲಿ ಬಹಳ ಪ್ರಮುಖ ಪಾತ್ರ ವಹಿಸುವ ಉಗುಳನ್ನು 'ಸಾರ್ವಜನಿಕ' ಸ್ಥಳಗಳಲ್ಲಿ ಉಗುಳಬಾರದೆಂಬ ಪ್ರತಿಬಂಧನವನ್ನು ಹೇರಿರುವುದು ವಿಷಾದನೀಯ. ಅಲ್ಲೂ ಸಹ ... ಆಗಿ ಉಗಿಯಲು, ಉಗಿಸಿಕೊಳ್ಳಲು ಯಾವ ಆತಂಕವೂ ಇಲ್ಲವೆಂದು ನಂಬಿದ್ದೇನೆ. ಹಾಗಿಲ್ಲದಿದ್ದರೆ, ಇಂತಹ effective ಅಸ್ತ್ರ ನಿರುಪಯೋಗವಾಗಿ, ಎಲ್ಲರ ಮನಶ್ಶಾಂತಿಯನ್ನು ಕದಡಿ, ಮನೋವೈದ್ಯರಲ್ಲಿ ಧಾವಿಸಬೇಕಾಗುತ್ತದೆ.

ಈ ವಿಷಯವನ್ನು ಗಮನದಲ್ಲಿಟ್ಟು ನಮ್ಮ ಭವ್ಯ ಭಾರತದಲ್ಲಿ, ಯಾರು ಎಲ್ಲಿ ಬೇಕಾದರೂ ಉಗಿದು ಹಾಯಾಗಿರಬಹುದು. ಯಾರ ಅಡ್ಡಿಯೂ ಇಲ್ಲ, ಯಾವ ಆತಂಕವೂ ಇಲ್ಲ. ಎಲ್ಲರೂ ಬೇಕಾದಾಗ, ಬೇಕೆನಿಸಿದಾಗ, ಮನಸ್ಸಿಗೆ ಬಂದ grade ಉಗಿತವನ್ನು ಎಲ್ಲಿ ಅಂದರೆ ಅಲ್ಲಿ ಉಗಿದು ಸುಖ ಶಾಂತಿಯಿಂದಿದ್ದಾರೆ.

ಈ ಉಗುಳುವ ಸ್ವಾತಂತ್ರ್ಯವನ್ನು ಪ್ರಜೆಗಳಿಗಿತ್ತು. ಸರ್ಕಾರ ತನ್ನ progressive outlook ನ್ನು ಪ್ರತಿಪಾದಿಸಿದೆ. ಈ ಕಾರಣದಿಂದಲೋ ಏನೋ ನಮ್ಮ ದೇಶಾನ "Spitful country' ಅಂತ ಅನ್ನೋದು.

ಕಡೆಯದಾಗಿ, ಉಗುಳು ಅಥವಾ ಉಗಿತ, ಮಾನವನ (ಮುಖ್ಯವಾಗಿ) ಜೀವನದಲ್ಲಿ ಅತಿ ಮುಖ್ಯ ಪಾತ್ರವನ್ನು ವಹಿಸುತ್ತದೆ, ಅನ್ನುವ ಅಂಶ ಅಧ್ಯಯನದಿಂದ ತಿಳಿದಿದೆ. ಹುಟ್ಟಿದಾಗಿನಿಂದ, ಸಾಯುವವರೆಗೆ, ನಮ್ಮ ಉಸಿರಿಗೆ ಸರಿಸಮಾನವಾಗಿ, ನಮ್ಮ ಜೊತೆ ಇದ್ದು, ನಮ್ಮ ಕೆಲಸ ಕಾರ್ಯಗಳಿಗೂ ಆರೋಗ್ಯಕ್ಕೂ ಮನಸ್ಶಾಂತಿಗೂ ಅತ್ಯಗತ್ಯವಾಗಿದೆ. ನಮ್ಮ ಉಗುಳನ್ನು ಸರಿಯಾಗಿ ಕಾಪಾಡಿಕೊಂಡು, ಸಮಯೋಚಿತವಾಗಿ ಸಂಯಮದಿಂದ ಉಪಯೋಗಿಸಿ, ಇನ್ನೊಬ್ಬರ ಉಗಿತಕ್ಕೆ ಸಿಕ್ಕಿ ಹಾಕಿಕೊಳ್ಳದೆ ಜೀವಿಸಬೇಕು.

ಈ ಮೇಲಿನ ನಾಲ್ಕು ಮಾತುಗಳೊಂದಿಗೆ ನಮ್ಮ 'ಉಗುಳಿನ' ಸಂಕ್ಷಿಪ್ತ reportನ್ನು ಮುಗಿಸುತ್ತೇನೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ನಮ್ಮನ್ನು ಸಂಪರ್ಕಿಸಿದಲ್ಲಿ, ಮಾಹಿತಿಯನ್ನು ಯಾವ ಶುಲ್ಕ ಇಲ್ಲದೆ ಒದಗಿಸಲು ಕಾತುರದಿಂದ ಕಾಯುತ್ತಿರುತ್ತೇವೆ.

★★★



''ಭವತಿ ಭಿಕ್ಷಾಂದೇಹಿ''

ಆನೆಸ್ಪಿ!

– ಹೆಚ್. ಗೋಪಾಲಕೃಷ್ಣ

ಕಬೋರ್ಡು ತೆಗೆದು ಬಿಳಿ ಪೇಪರಿಗೆ ತಡಕಾಡಿದೆ. ಇಲ್ಲ - ಸಿಗಲಿಲ್ಲ. ಬೆಳಿಗ್ಗೆ ಬೆಳಿಗ್ಗೆ ಬೇಕಾದ್ದು ಸಿಕ್ಕಲಿಲ್ಲ ಅಂದರೆ ಕೋಪ ಬರುಲ್ಲವೇ? ನಮ್ಮ ಗುಮಾಸ್ತರನ್ನ ಕರೆದೆ. ''ಏನ್ರೀ ಬಿಳಿ ಪೇಪರು ತಂದಿಡಿ ಅಂತ ಬಡ್ಕೋತೀನಿ. ತಂದಿಡೋದಿಕ್ಕೆ ಆಗುಲ್ಲವೇನ್ರೀ?...'' ಅಂತ ರೇಗಿದೆ. 'ನಿನ್ನೇನೇ ಸ್ಟೋರ್ಸ್‌ಗೆ ಹೋಗಿದ್ದೆ ಸಾರ್. ನಿಮ್ಮ ಡಿಪಾರ್ಟ್‌ಮೆಂಟಿನವರು ಪೇಪರನ್ನೇ ತಿಂತಾರೇನ್ರೀ ಅಂತ ಕೇಳಿದರು. ಈಗ ಸ್ಟಾಕಿಲ್ಲ ಹೋಗ್ರೀ ಅಂತ ಕಳಿಸಿಬಿಟ್ಟರು' ಅಂದ.

'ತಿಂಗಳು ತಿಂಗಳೂ ಒಂದು ರೀಮು ನಮ್ಮ ಕೋಟಾ ಇರೋದು ಸಾರ್. ಈಗ ಹತ್ತು ತಿಂಗಳಿಂದ ಆರು ರೀಮು ತರ್‍ತಿದೀನಿ' ಅಂತ ಸೇರಿಸಿದ. ಆರು ರೀಮಿನಲ್ಲಿ ಐದು ರೀಮು ನಾನೇ ಖರ್ಚು ಮಾಡ್ತಿರೋದು ನನಗೇ ಗೊತ್ತು. ಅದರಿಂದ 'ಆರು ರೀಮು ಯಾಕೆ ತರ್‍ತಾ ಇದೀರ್‍ರೀ?' ಅಂತ ರೇಗಲಿಲ್ಲ. 'ಅರ್ಜೆಂಟಾಗಿ ಕೊಂಚ ಪೇಪರು ಬೇಕು. ಯಾವುದಾದರೂ ಸೆಕ್ಷನ್ನಿಗೆ ಹೋಗಿ ಒಳ್ಳೇ ಪೇಪರು, ಹಾಲುಬಿಳೀ ಬಣ್ಣ ಇರಬೇಕು, ಮೋದಿ ಕ್ಸೆರಾಕ್ಸ್ ಪೇಪರು ಅಂತ ಗೊತ್ತು ತಾನೇ? ಅದರದ್ದು ಒಂದು ಬಂಡಲು ತಗೊಂಡು ಬನ್ನಿ. ಐನೂರು ಶೀಟ್ಸು ಇರುತ್ತೆರೀ ಗೊತ್ತಲ್ಲಾ ನಿಮಗೆ?...' ಅಂತ ಬೇರೆ ಸೆಕ್ಷನ್ನಿಗೆ ಕಳಿಸಿದೆ.

ತಲೇಲಿ ಒಂದು ಐಡಿಯಾ ಸೇರಿಬಿಟ್ಟಿತ್ತು. ಅದನ್ನ ಅರ್ಜೆಂಟಾಗಿ ಪೇಪರಿನ ಮೇಲೆ ಕಕ್ಕಿ ಪತ್ರಿಕೆಗೆ ರವಾನಿಸಬೇಕಿತ್ತು. ಅಂತಹ ಸಮಯದಲ್ಲೇ ಪೇಪರು ಇಲ್ಲ ಅಂದರೆ? ಗುಮಾಸ್ತ ಆರೇಳು ಸೆಕ್ಷನ್ನು ಹುಡುಕಿ ಅರ್ಧ ಬಂಡಲಿನಷ್ಟು ಪೇಪರು ತಂದ. ನೋಡಿದರೆ ಮುಟ್ಟಬೇಕು ಅನಿಸುವಂತಹ ಬಿಳುಪು ಬಣ್ಣ ಮುಟ್ಟಿದರೆ ಅದು ಕೊಳೆ ಆಗಬಹುದೇನೋ ಅಂಬ ಅಳುಕು ಇವುಗಳ ಸಂಗಡವೇ ಪೇಪರು ಸ್ವೀಕರಿಸಿದೆ. ಪೆನ್ನಿಗೆ ಅಂತ ಜೇಬಲ್ಲಿ ಕೈ ಹಾಕಿದೆ. ಇವತ್ತು ಬರುತ್ತಾ ಪೆನ್ನೂ ಮರೆತುಬಂದಿದ್ದೆ. ಹಿಂದಿನ ದಿವಸ ರಾತ್ರಿ ಮಗಳು ಹೋಂವರ್ಕ್‌ಗೆ ಅಂತ ಪೆನ್ನು ತಗೊಂಡಿದ್ದಳು. ಜೇಬಲ್ಲಿ ಮತ್ತೆ ಇರಿಸೋದು ಮರ್‍ತಿದಾಳೆ... ಬೆಲ್ ಬಾರಿಸಿದೆ. ಗುಮಾಸ್ತ ಕಂಪಿನಿ ಹಾಜರಾದರು. 'ರೀ ಪೆನ್ ಇದೆಯೇನ್ರೀ? ನನ್ನ ಪೆನ್ ತಂದಿಲ್ಲ ಇವತ್ತು?...' ಅಂದೆ. ಗುಮಾಸ್ತ ನಾಚುತ್ತಾ ನಾಚುತ್ತಾ ಜೇಬಿನಿಂದ ಪೆನ್ ಆಚೆ ತೆರೆದರು. ದೇಹದ ಸುತ್ತಲೂ ಟೇಪು ಸುತ್ತಿಕೊಂಡಿದ್ದ ಪೆನ್ನು ಬಹುಶಃ ಅವರ ತಾತನ ಕಾಲದ್ದು ಇರಬೇಕು. ಸೀಳಿದ ಕಡೆ ಎಲ್ಲಾ ಟೇಪು ಸುತ್ತಿ ಸುತ್ತಿ ಅದು ಕಪ್ಪು ಬಣ್ಣ ಹತ್ತಿ ನೋಡೋದಕ್ಕೆ ಅಸಹ್ಯ

ಆಗೋಂತಹದ್ದು. 'ತಥ್ ಇದನ್ನ ಪೆನ್ನು ಅಂತ ಕರೀಲಿಕ್ಕೆ ಆಗ್ತದೇನ್ರೀ? ಯಾರನ್ನಾದರೂ ಅರ್ಜೆಂಟಾಗಿ ಮಾರ್ಕೆಟ್‌ಗೆ ಕಳಿಸಿ ಒಂದು ಒಳ್ಳೇ ಪೆನ್ ತರಿಸ್ರೀ, ಕಂಟಿಜೆನ್ಸಿ ಫಂಡ್‌ನಿಂದ ಅವರಿಗೆ ಕಾಸು ಕೊಡಿಸ್ರೀ...' ಅಂದೆ. ಗುಮಾಸ್ತ ತಲೆ ಆಡಿಸಿ ಆಚೆ ನಡೆದರು. ಹತ್ತು ನಿಮಿಷದ ನಂತರ ಬಂದರು 'ಸಾರ್ ವೆಹಿಕಲ್ ಇರಲಿಲ್ಲ ಆಟೋದಲ್ಲೇ ಹೋಗಿದ್ದು ಬನ್ನಿ ಅಂತ ಕೃಷ್ಣಮೂರ್ತಿನ ಕಳಿಸಿದೆ' ಅಂದರು. ತಲೆ ಆಡಿಸಿದೆ. ಒಂಬತ್ತೂವರೆಗೆ ಪ್ರೊಡಕ್ಷನ್ ಮೀಟಿಂಗು, ಹತ್ತೂವರೆಗೆ ಸೆಕ್ಷನ್ ಇನ್‌ಚಾರ್ಜ್ ಮೀಟಿಂಗು, ಹನ್ನೆರಡಕ್ಕೆ... ಅಂತ ಪಟ್ಟಿ ಒದರಲು ಆರಂಭಿಸಿದ ಆತನನ್ನ ತಡೆದೆ. 'ಎಲ್ಲಾ ಮೀಟಿಂಗೂ ಕ್ಯಾನ್ಸಲ್ ಮಾಡಿಬಿಡಿ. ನಾಳೆ ಇಟ್ಕೊಳ್ಳೋಣ ತುಂಬಾ ಬಿಸಿ ಇವತ್ತು ನಾನು...' ಅಂದೆ.

ತಲೆ ಕೆರೀತಾ ನಿಂತ. 'ಏನ್ರೀ?' ಅಂತ ಸಿಡುಕಿದೆ.

'ಬೇರೆ ಬೇರೆ ಯೂನಿಟ್‌ಗಳಿಂದ ಬಂದಿದೀವಿ ನಿನ್ನೇನೂ ಮೀಟಿಂಗ್ ಕ್ಯಾನ್ಸಲ್ ಆಯಿತು ಇವತ್ತು ಆಗಲೇಬೇಕು ಅಂತಿದ್ದರು' ಅಂದ. ಅಯ್ಯೋ ಹೇಳ್ರೀ ಅವರಿಗೆ ಫ್ಯಾಕ್ಟರಿ ಏನೂ ಬಿದ್ದು ಹೋಗುಲ್ಲ ಹಾಗೇ ಇರುತ್ತೆ ಅಂತ. ಜಾಸ್ತಿ ದಿನ ಇಲ್ಲೇ ಇದ್ದರೆ ಜಾಸ್ತಿ ಟಿ.ಎ. ಡಿ.ಎ. ಗಿಟ್ಟುತ್ತೆ. ಬೇಜಾರಾದರೆ ಒಂದೆರಡು ಇಂಗ್ಲಿಷು, ಒಂದೆರಡು ಮಲಯಾಳಿ ಸಿನಿಮಾ ನೋಡು ಅಂತ ಹೇಳ್ರೀ. ನೋ ಡಿಸ್ಟರ್ಬನ್ಸ್ ಗೊತ್ತಾಯಿತೇನ್ರೀ?... ಅಂದೆ. ಆತ ತಲೆ ಆಡಿಸಿ ಆಚೆ ನಡೆದ.

ಮತ್ತೆ ಅರ್ಧ ಘಂಟೇಲಿ ಪೆನ್ ತಂದಿಟ್ಟ. ಅದರ ಸಂಗಡ ಹವೆ ಆಡ್ತಿರೋ ಕಾಫಿ, ಬ್ರೆಡ್ಡು ಜಾಮು. ಕಾಫಿ ಮುಗಿಸಿದೆ. ತಲೆ ತಗ್ಗಿಸಿ ಎರಡೂವರೆ ಗಂಟೆ ಚಿಂತಿಸಿ ಆರು ಪುಟದ ಲೇಖನ ಸಿದ್ಧಮಾಡಿದೆ. ಗುಮಾಸ್ತರನ್ನ ಮತ್ತೆ ಕರೆದೆ. ಫ್ಯಾಕ್ಟರೀದೇ ಕವರಿನಲ್ಲಿ ಅದನ್ನ ಹಾಕಿಸಿ ಫ್ಯಾಕ್ಟರಿ ಅವರದ್ದೇ ಕೊರಿಯರ್ ಸರ್ವೀಸಿನಲ್ಲಿ ಅದನ್ನ ಪತ್ರಿಕಾ ಸಂಪಾದಕರಿಗೆ ರವಾನಿಸಿ ಅಂತ ಸೂಚಿಸಿದೆ.

ಊಟಕ್ಕೆ ಅಂತ ಕ್ಯಾಬಿನ್ನಿನಿಂದ ಆಚೆ ಬಂದರೆ ಗುಮಾಸ್ತ ಯಾವುದೋ ಪೋಸ್ಟ್‌ಕಾರ್ಡ್ ಬರೀತಾ ಕೂತಿದ್ದ. ಆಗತಾನೇ ಬರೆದ ಲೇಖನ ತಲೇಲಿ ಹಾಗೇ ಅಚ್ಚಾಗಿತ್ತು. ರೀ ಮೂರ್ತೀ ಅಂತ ಗುಮಾಸ್ತನನ್ನ ಕರೆದೆ. ಗಡಿಬಿಡಿಯಿಂದ ಆತ ಮೇಲೆದ್ದ 'ರೀ ವಿಶ್ವೇಶ್ವರಯ್ಯನವರ ಕತೆ ಗೊತ್ತೇನ್ರೀ?...' ಅಂತ ಕೇಳಿದೆ. 'ಯಾವ ವಿಶ್ವೇಶ್ವರಯ್ಯ ಸಾರ್?' ಅಂದ.

'ಅದೇರೀ ನಮ್ಮ ಮೈಸೂರಿನ ದಿವಾನರಾಗಿದ್ದರಲ್ಲಾ ಅವರೂರೀ' ಅವರ ಕತೆ ನಿಮಗೆಲ್ಲಿ ಗೊತ್ತಿರುತ್ತೆ? ಆ ಮನುಷ್ಯನ ಹಾನೆಸ್ಟಿ ಬಗ್ಗೆ ಒಂದು ಚಿಕ್ಕ ಎಪಿಸೋಡ್ ನೆನಪಿಗೆ ಬಂತೂರೀ. ಅದೇನೂಂತ ಹೇಳಲೇನ್ರೀ?... ಅಂತ ಆತನ ಉತ್ತರ ಕಾಯದೆ

ಮುಂದುವರೆಸಿದೆ. 'ವಿಶ್ವೇಶ್ವರಯ್ಯನವರ ಜೇಬಿನಲ್ಲಿ ಯಾವಾಗಲೂ ಎರಡು ಪೆನ್ನು ಇರ್‍ತಾ ಇತ್ತಂತೆರೀ. ಹಾಗೇನೇ ಅವರು ಟೂರು ಅಂತ ಹೋದಾಗ ಎರಡು ಕ್ಯಾಂಡಲು ತಗೊಂಡು ಹೋಗ್ತಾ ಇದ್ದರಂತ್ರೀ. ಯಾಕೆ ಯಾವಾಗಲೂ ಇವರು ಎರಡು ಪೆನ್ನು ಎರಡು ಕ್ಯಾಂಡಲು ತಗೊಂಡು ಹೋಗ್ತಾರೆ ಅಂತ ಒಂದು ಸಲ ಯಾರೋ ಯಾಕೆ ಸಾರ್ ಇವು ಎರಡೆರಡು? ಅಂತ ಕೇಳಿದರು. ಅದಕ್ಕೆ ವಿಶ್ವೇಶ್ವರಯ್ಯನವರು ಏನು ಹೇಳಿದರಂತೆ ಗೊತ್ತೇನ್ರೀ?

ಒಂದು ಪೆನ್ನಲ್ಲಿ ಸರ್ಕಾರದ ಇಂಕು. ಇನ್ನೊಂದರಲ್ಲಿ ನಾನು ದುಡ್ಡು ಕೊಟ್ಟು ಹಾಕಿಸಿರೋ ಇಂಕು ಇದೆ. ಸರ್ಕಾರದ ಕೆಲಸ ಮಾಡಲೇಬೇಕಾದ ಸರ್ಕಾರದ ಇಂಕು ಇರೋ ಪೆನ್ನಲ್ಲಿ ಬರೀತೀನಿ. ನನ್ನ ಕೆಲಸಕ್ಕೆ ನನ್ನ ಇಂಕು ಅಂತ ಅದರಂತೆ. ಟೂರ್ ಹೋಗ್ತಿದ್ದರಲ್ಲಾ ಆಗ ಸರ್ಕಾರದ ಕೆಲಸ ಮಾಡಬೇಕಾದರೆ ಸರ್ಕಾರದ ಹಣದಲ್ಲಿ ಕೊಂಡಿದ್ದ ಕ್ಯಾಂಡಲು ಉರಿಸ್ತಿದ್ದರಂತೆ. ಇವರ ಕೆಲಸಕ್ಕೆ ಇವರ ಕ್ಯಾಂಡಲು ಗೊತ್ತೇನ್ರೀ? ನೀವು ಕಾರ್ಖಾನೆ ಸಮಯದಲ್ಲಿ ಪೋಸ್ಟ್ ಕಾರ್ಡ್ ಬರೀತಾ ಇದ್ದರಲ್ಲಾ ಅದನ್ನ ನೋಡಿ ಈ ಎಪಿಸೋಡು ನಿಮಗೆ ಹೇಳೋದು ಅಂತ ಅಂದುಕೊಂಡೆ. ವಿಶ್ವೇಶ್ವರಯ್ಯ ಎಂತಾ ಹಾನೆಸ್ಟ್ ಮನುಷ್ಯ ಅಲ್ಲವೇನ್ರೀ? ಗುಮಾಸ್ತರು ಪೆಚ್ಚು ನಗೆ ನಗುತ್ತಾ 'ಹೌದೌದು ಸಾರ್' ಅಂದರು! ಅಂತಹವರು ಇದ್ದದ್ದರಿಂದಲೇ ಅಲ್ಲವೇ ನಮಗೂ ಹಾನೆಸ್ಟಿ ಬಂದದ್ದು? ಹಾನೆಸ್ಟಿ ಬಗೆಗೆ ಆಗಾಗ ಇವರದ್ದೇ ಉದಾಹರಣೆಯಿಂದ ಭಾಷಣ ಬಿಗಿಯೋ ಬರಹ ಬರೆಯೋ ಚಟ ಆರಂಭ ಆಗಿ ಮುಂದುವರೀತಿರೋದೂ? ವಿಶ್ವೇಶ್ವರಯ್ಯನಂತಹವರ ಪೀಳಿಗೆ ಈ ಕಾರಣಕ್ಕಾದರೂ ಬೆಳೀಲಿ ಅಲ್ಲವೇ?

★★★



''ಸಿಟ್ಟಿಂಗ್ ಪ್ರೆಟ್ಟಿ'' ಅಂದ್ರೆ
ಇದೇನೇನೋ



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003. Printed at RAVI GRAPHICS, 62, 4th Cross, SSI Area, Rajajinagar, Bangalore 560 010.